# ಸೋಮವಾರ ೧೪ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು, ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ, ಸೋಮವಾರ ದಿನಾಂಕ ೧೪. ಜುಲೈ ೧೯೪೭ರಂದು ಬೆಳಗ್ಗೆ ೧೧ ಘಂಟೆಗೆ ಸಮಾವೇಶಗೊಂಡಿತು. (ಗೌರವಾನ್ವಿತ ಡಾ. ರಾಜೇಂದ್ರಪ್ರಸಾದ್) ಸಭೆಯ ಅಧ್ಯಕ್ಷತೆ ವಹಿಸಿದ್ದರು.

## ಪರಿಚಯಪತ್ರಗಳು ಹಾಜರುಪಡಿಸುವುದು ಮತ್ತು ರಿಜಿಸ್ಟರ್‌ನಲ್ಲಿ ಸಹಿ ಹಾಕುವುದು.

**ಮಾನ್ಯ ಅಧ್ಯಕ್ಷರು** : ತಮ್ಮ ವಿವರಪತ್ರಗಳನ್ನು ಹಾಜರುಪಡಿಸಿದ ಮತ್ತು ಇನ್ನೂ ರಿಜಿಸ್ಟರ್‌ಗೆ ಸಹಿ ಹಾಕದ ಸದಸ್ಯರು ಈಗ ಹಾಕಬಹುದು.

(ನಂತರ ಕಾರ್ಯದರ್ಶಿ ಹಾಜಿ ಅಬ್ದುಲ್ ಸತ್ತಾರ್ ಹಮ್/ಹಾಜಿ ಇಷಾಕ್ ಸೇಠ್ ಅವರ ಹೆಸರನ್ನು ಕೂಗಿದರು).

**ಶ್ರೀ ದೇಶಬಂಧು ಗುಪ್ತ** : (ದೆಹಲಿ) : ಮಾನ್ಯ ಅಧ್ಯಕ್ಷರೆ, ನಾನು ಒಂದು ಕ್ರಿಯಾಲೋಪವೆತ್ತಬಹುದೆ?

ಗೌರವಾನ್ವಿತ ಸದಸ್ಯರನ್ನು, ರಿಜಿಸ್ಟರ್‌ಗೆ ಸಹಿ ಹಾಕುವಂತೆ ಕರೆಯುವ ಮೊದಲು, ಅವರು ಈಗಲೂ ದ್ವಿರಾಷ್ಟ್ರ ಸಿದ್ಧಾಂತವನ್ನು ಅನುಮೋದಿಸುವರೆ ಇಲ್ಲವೆ ಎಂದು ಕೇಳುವುದು ಈ ಸದನಕ್ಕೆ ಉಚಿತವೆನಿಸುವುದಿಲ್ಲವೆ ಎಂಬುದನ್ನು ತಿಳಿಯಬಯಸುತ್ತೇನೆ. ನಾನು ಅರ್ಥಮಾಡಿಕೊಂಡಂತೆ ಸರ್ವತಂತ್ರ ಸ್ವತಂತ್ರ ರಾಷ್ಟ್ರದ ಪ್ರಜೆಗಳಾಗಿ ಮತ್ತು ಈಗಾಗಲೇ ನಿರ್ಧರಿಸಲ್ಪಟ್ಟ ರಾಷ್ಟ್ರವಿಭಜನೆಯ ದೃಷ್ಟಿಯಿಂದ, ನಾವು ಇಡೀ ಪ್ರಶ್ನೆಯನ್ನು ಪುನರೀಕ್ಷಿಸಬೇಕು, ಮತ್ತು ನಿರ್ಣಯಕ್ಕೆ ಈಗಾಗಲೇ ಅನುಮೋದಿಸಲ್ಪಟ್ಟ ಧ್ಯೇಯೋದ್ದೇಶಗಳ ನಿಲುವಳಿಗೆ ಸದಸ್ಯರೊಬ್ಬರ ಸಹಮತ ಇಲ್ಲವಾದರೆ ಅವರು ರಿಜಿಸ್ಟರ್‌ಗೆ ಸಹಿ ಹಾಕುವಂತಿಲ್ಲ ಎಂದು ಒಂದು ನಿಬಂಧನೆಯನ್ನು ವಿಧಿಸಬೇಕು.

ತಮ್ಮ ನಿರ್ಣಯವನ್ನು ಕೋರುತ್ತೇನೆ, ಮಾನ್ಯರೆ,

**ಮಾನ್ಯ ಅಧ್ಯಕ್ಷರು** : ಒಂದು ಸ್ವಾರಸ್ಯಕರ ಅಂಶದ ಪ್ರಸ್ತಾಪವಾಗಿದೆ. ಆದರೆ ನಾನದನ್ನು ಕ್ರಿಯಾಲೋಪ ಎಂದು ಭಾವಿಸುವುದಿಲ್ಲ. ಇದು ಪ್ರಸ್ತುತ, ನಿರೂಪಿತವಾದ ಪ್ರಕ್ರಿಯೆಯ ಮೇರೆಗೆ ಸಂವಿಧಾನ ರಚನಾಸಭೆಗೆ ಚುನಾಯಿತರಾಗಿರುವ ಸದಸ್ಯರ ಹಕ್ಕಿನ ಪ್ರಶ್ನೆ. ಯಾರೇ ಒಬ್ಬ ಚುನಾಯಿತ ಸದಸ್ಯ ರಾಜೀನಾಮೆ ನೀಡದಿರುವ ವರೆಗೆ, ಸಭೆಯಲ್ಲಿ ಕುಳಿತಿರುವ ಸ್ವಾತಂತ್ರ್ಯ ಅವರಿಗುಂಟು. ಆದುದರಿಂದ, ಯುಕ್ತವಾಗಿ ಚುನಾಯಿತರಾದ ಯಾರೇ ಒಬ್ಬರು ಸದಸ್ಯರನ್ನು ರಿಜಿಸ್ಟರ್‌ಗೆ ಸಹಿ ಮಾಡುವುದನ್ನು ತಪ್ಪಿಸಲಾರೆ ಎಂದುಕೊಳ್ಳುತ್ತೇನೆ.

ಕೆಳಕಂಡ ಸದಸ್ಯರು ತಮ್ಮ ಪರಿಚಯಪತ್ರಗಳನ್ನು ಹಾಜರುಪಡಿಸಿ. ರಿಜಿಸ್ಟರ್‌ಗೆ ಸಹಿ ಹಾಕಿದರು:

**ಮದ್ರಾಸ್:**

೧. ಹಾಜಿ ಅಬ್ದುಲ್ ಸತ್ತಾರ್ ಹಾಜಿ ಇಷಾಕ್ ಸೇಠ್

೨. ಬಿ. ಪಾಕರ್ ಸಾಹಿಬ್

೩. ಕೆ.ಟಿ.ಎಂ. ಅಹಮದ್ ಇಬ್ರಾಹಿಂ ಸಾಹಿಬ್ ಬಹಾದುರ್

೪. ಮಹಬೂಬ್ ಅಲಿ ಬೇಗ್ ಸಾಹಿಬ್

೫. ಗೌರವಾನ್ವಿತ ಮಿ. ಇಸ್ಮಾಯಿಲ್ ಇಬ್ರಾಯಿಂ ಚುಂದ್ರೀಗರ್

೬. ಡಾ. ಬಿ. ಆರ್. ಅಂಬೇಡ್ಕರ್
೭. ಶ್ರೀ ಅಬ್ದುಲ್ ಖಾದರ್ ಮೊಹಮ್ಮದ್ ಷೇಕ್
೮. ಪಂಡಿತ್ ಲಕ್ಷ್ಮೀಕಾಂತ ಮೈತ್ರ
೯. ಶ್ರೀ ದೇಬಿ ಪ್ರಸಾದ್ ಖೈತಾನ್
೧೦. ಶ್ರೀಮತಿ ರೇಣುಕಾ ರಾಯ್
೧೧. ಶ್ರೀ ದಾಂಬರ್ ಸಿಂಗ್ ಗುರುಂಗ್
೧೨. ಶ್ರೀ ಆರ್. ಇ. ಪಟೇಲ್
೧೩. ಶ್ರೀ ಪ್ರಫುಲ್ಲ ಚಂದ್ರ ಸೇನ್
೧೪. ಶ್ರೀ ಉಪೇಂದ್ರನಾಥ್ ಬರ್ಮನ್
೧೫. ಶ್ರೀ ರಫೀಬ್ ಅಹ್ಸನ್
೧೬. ಶ್ರೀ ನಝಿರುದ್ದೀನ್ ಅಹ್ಮದ್
೧೭. ಶ್ರೀ ಅಬ್ದುಲ್ ಹಮೀದ್
೧೮. ಶ್ರೀ ಸತೀಶ್ ಚಂದ್ರ ಸಾಮಂತ
೧೯. ಶ್ರೀ ಸುದೇಶ್ ಚಂದ್ರ ಮಜುಂದಾಸ್
೨೦. ಶ್ರೀ ಬಸಂತ ಕುಮಾರ್ ದಾಸ್
೨೧. ಶ್ರೀ ಸುರೇಂದ್ರ ಮೋಹನ್ ಘೋಷ್
೨೨. ಶ್ರೀ ಅರುಣ್ ಚಂದ್ರ ಗುಹಾ

**ಸಂಯುಕ್ತ ಪ್ರಾಂತ್ಯಗಳು**

೨೩. ಚೌಧರಿ ಖಲಿಕುಜ್ಜಮಾನ್
೨೪. ನವಾಬ್ ಮಹಮ್ಮದ್ ಇಸ್ಮಾಯಿಲ್ ಖಾನ್
೨೫. ಶ್ರೀ ಅಜ್ಜೀಜ಼ ಅಹ್ಮದ್ ಖಾನ್
೨೬. ಬೇಗಂ ಐಜಾಜ್ ರಸೂಲ್
೨೭. ಶ್ರೀ ಎಸ್. ಎಂ. ರಿಜ್ವಾನ್ ಅಲ್ಲಾಹ್

**ಪೂರ್ವ ಪಂಜಾಬ್**

೨೮. ಗೌರವಾನ್ವಿತ ಸರ್ದಾರ್ ಬಲದೇವ್ ಸಿಂಗ್
೨೯. ದಿವಾನ್ ಚಮನ್ ಲಾಲ್
೩೦. ಮೌಲಾನಾ ದಾವೂದ್ ಘಜನಿ
೩೧. ಗ್ಯಾನಿ ಗುರುಮುಖ್ ಸಿಂಗ್ ಮುಸಾಫರ್
೩೨. ಷೇಕ್ ಮಹಬೂಬ್ ಇಲಾಹಿ
೩೩. ಸೂಫಿ ಅಬ್ದುಲ್ ಹಮೀದ್ ಖಾನ್
೩೪. ಚೌಧುರಿ ಮೊಹಮ್ಮದ್ ಸಿಂಗ್
೩೫. ಚೌಧರಿ ರಣಬೀರ್ ಸಿಂಗ್
೩೬. ಶ್ರೀ ಬಿಕ್ರಮ್‌ಲಾಲ್ ಸೋಂಧಿ
೩೭. ಪ್ರೊಫೆಸರ್ ಯಶವಂತ ರಾಯ್

**ಬಿಹಾರ್**

೩೮. ಶ್ರೀ ತಾಜುಮಲ್ ಹುಸೇನ್

೩೯. ಶ್ರೀ ಸೈಯದ್ ಜಾಫರ್ ಇಮಾಮ್

೪೦. ಶ್ರೀ ಲತೀಫುರ್ ರಹಮಾನ್

೪೧. ಶ್ರೀ ಮೊಹಮ್ಮದ್ ತಾಹಿರ್

**ಸಂ.ಪ್ರಾ. ಮತ್ತು ಬೆರಾರ್**

೪೨. ಖಾಜಿ ಸೈಯದ್ ಕರೀಮುದ್ದೀನ್

**ಅಸ್ಸಾಂ**

೪೩. ಸೈಯದ್ ಮುಹಮ್ಮದ್ ಸಾದುಲ್ಲಾ

೪೪. ದಿವಾನ್ ಬಹಾದುರ್ ಸರ್. ಎ. ರಾಮಸ್ವಾಮಿ ಮುದಲಿಯಾರ್

೪೫. ಶ್ರೀ ಕೆ.ಚೆಂಗಲರಾಯ ರೆಡ್ಡಿ

೪೬. ಶ್ರೀ ಎಚ್. ಆರ್. ಗುರುವ ರೆಡ್ಡಿ

೪೭. ಶ್ರೀ ಎಚ್. ಕೃಷ್ಣಮೂರ್ತಿ ರಾವ್

೪೮. ಶ್ರೀ ಎಚ್. ಚಂದ್ರಶೇಖರಯ್ಯ

೪೯. ಶ್ರೀ ಮೊಹಮ್ಮದ್ ಷರೀಫ್

೫೦. ಶ್ರೀ ಟಿ. ಚನ್ನಯ್ಯ

**ಗ್ವಾಲಿಯರ್**

೫೧. ಶ್ರೀ ಎಂ. ಎ ಶ್ರೀನಿವಾಸನ್

೫೨. ಲೆಫ್ಟಿನೆಂಟ್ ಕರ್ನಲ್ ಬ್ರಿಜ್‌ರಾಜ್ ನಾರಾಯಣ್

೫೩. ಶ್ರೀ ಗೋಪಾಲಕೃಷ್ಣ ವಿಜಯವರ್ಗೀಯ

೫೪. ಶ್ರೀ ರಾಮ್ ಸಹಾಯ್

**ಬರೋಡಾ**

೫೫. ಶ್ರೀ ಚುನ್ನಿಲಾಲ್ ಪುರುಷೋತ್ತಮ್‌ದಾಸ್ ಷಾ

**ಉದಯಪುರ್**

೫೬. ಡಾ. ಮೋಹನ್ ಸಿನ್ಹ ಮೆಹ್ತಾ

೫೬. ಶ್ರೀ ಮಾಣಿಕ್ಯಲಾಲ್ ವರ್ಮ

**ಜೈಪುರ್**

೫೭. ಖೇತ್ರಿಯ ರಾಜಾ ಸರ್ದಾರ್ ಸಿಂಗೆಜಿ ಬಹಾದೂರ್

**ಆಳ್ವಾರ್**

೫೮. ಡಾ. ಎನ್. ಬಿ. ಖರೆ

**ಕೋಟಾ**

೫೯. ಲೆಫ್ಟಿನೆಂಟ್ ಕರ್ನಲ್ ಕುನ್ವರ್ ದಲೇಲ್ ಸಿಂಗ್

**ಪಾಟಿಯಾಲ**

೬೦. ಸರ್ದಾರ್ ಜೈದೇವ್ ಸಿಂಗ್

೬೧. ಶ್ರೀ ಹಿಮ್ಮತ್ ಸಿಂಗ್ ಕೆ. ಮಹೇಶ್ವರಿ

**ತ್ರಿಪುರ, ಮಣಿಪುರ್ ಮತ್ತು ಖಾಸಿ ರಾಜ್ಯಗಳು**

೬೨. ಶ್ರೀ ಜಿ. ಎಸ್. ಗುಹ

**ಶಾಂಪುರ್ ಮತ್ತು ಬನಾರಸ್**

೬೩. ಶ್ರೀ ಬಿ. ಎಂ. ಜೈದಿ

**ಪೂರ್ವ ರಜಪುತಾನ ರಾಜ್ಯಗಳು**

೬೪. ಮಹಾರಾಜ ಮಾಂಧಾತ ಸಿಂಗ್

೬೫. ಮಹಾರಾಜ ನಾಗೇಂದ್ರ ಸಿಂಗ್

೬೬. ಮಿ. ಗೋಕುಲ್ ಭಾಯ್‌ಡಿ. ಭಟ್

**ಪಶ್ಚಿಮ ಇಂಡಿಯಾ ಮತ್ತು ಗುಜರಾತ್ ರಾಜ್ಯಗಳು**

೬೭. ಕರ್ನಲ್ ಮಹರಾಜ್ ಶ್ರೀ ಹಿಮ್ಮತ್ ಸಿಂಗ್‌ಜೀ

೬೮. ಶ್ರೀ ಎ.ಪಿ ಪಟ್ಟಾಣಿ

೬೯. ಶ್ರೀ ಗಂಗಾ ವಿಹಾರಿ ಲಲ್ಲೂಭಾಯಿ ಮೆಹ್ತಾ

೭೦. ಶ್ರೀ ಭವನ್ ಜೀ ಅರ್ಜುನ್ ಖಿಮ್ಜಿ

೭೧. ಖಾನ್ ಬಹಾದುರ್ ಫಿರೋಜ್ ಕೋಕ್‌ವಾಲ

೭೨. ಶ್ರೀ ವಿನಾಯಕ್ ರಾವ್ ವೈದ್ಯ

**ಡೆಕ್ಕನ್ ರಾಜ್ಯಗಳು**

೭೩. ಎಂ. ಎಸ್. ಆನೆ

೭೪. ಶ್ರೀ ಬಿ. ಮುನವಳ್ಳಿ

**ಪೂರ್ವ ರಾಜ್ಯಗಳು**

೭೫. ರಾಯ್ ಸಾಹೇಬ್ ರಘುರಾಜ್ ಸಿಂಗ್

೭೬. ರಾಯ್ ಬಹಾದೂರ್ ಲಾಲಾರಾಜ್ ಕನ್ವರ್

೭೭. ಶ್ರೀ ಸಾರಂಗಧರ ದಾಸ್

೭೮. ಶ್ರೀ ಯುಧಿಷ್ಠಿರ್ ಮಿಶ್ರ

**ಉಳಿಕೆ ಸಮೂಹ**

೭೯. ಶ್ರೀ ಬಲ್‌ವಂತ್ ರಾಯ್ ಗೋಪಾಲ್‌ಜೀ ಮೆಹ್ತಾ

**ಮಾನ್ಯ ಅಧ್ಯಕ್ಷರು :** ರಿಜಿಸ್ಟರ್‌ಗೆ ಸಹಿ ಹಾಕಿಲ್ಲದ ಸದಸ್ಯರು ಇನ್ನು ಯಾರಾದರೂ ಇದ್ದಾರೆಯೆ? ಇಲ್ಲಿ ಇನ್ನೂ ಸಹಿ ಮಾಡದೆ ಇರುವವರು ಯಾರೂ ಇಲ್ಲ ಎಂದುಕೊಳ್ಳುತ್ತೇನೆ.

**ಶ್ರೀ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು) : ತಾವು ಇಂದಿನ ಕಾರ್ಯಕಲಾಪಗಳನ್ನು ಪ್ರಾರಂಭಿಸುವ ಮುಂಚೆ, ತಮ್ಮ ಅನುಮತಿ ಬೇಡಿ ಕೆಲವು ಪ್ರಶ್ನೆಗಳನ್ನು ಕೇಳುವುದಿದೆ. ಅನುಮತಿಸುತ್ತೀರಾ]*

**ಮಾನ್ಯ ಅಧ್ಯಕ್ಷರು :** *[ಇದುವರೆಗಿನ ಪದ್ಧತಿಯಂತೆ, ಯಾವುದೇ ಒಂದು ಪ್ರಶ್ನೆಯನ್ನು ಸಭೆಯ ಮುಂದಿಟ್ಟಾಗ, ಅದರ ಬಗ್ಗೆ ಚರ್ಚಿಸಲು ಅನುಮತಿಸಬಹುದೇ ಬೇಡವೆ ಎಂಬುದನ್ನು ಪರಿಶೀಲಿಸಬೇಕಾಗುತ್ತೆ. ಇದುವರೆಗೆ, ಯಾವ ಪ್ರಶ್ನೆಯೂ ಪ್ರಸ್ತಾವಕ್ಕೆ ಬಂದಿಲ್ಲ. ತಾವೇನನ್ನು ಹೇಳಲು ಉದ್ದೇಶಪಟ್ಟಿರುವಿರೋ ತಿಳಿಯದು. ತಮ್ಮ ಉದ್ದೇಶಿತ ಪ್ರಶ್ನೆ ಸೂಕ್ತವೆ ಕ್ರಮಬದ್ಧವೆ ಎಂಬುದನ್ನು ತಿಳಿದರೆ, ತಮಗೆ ಅನುಮತಿ ನೀಡಬಹುದು ಎನಿಸುತ್ತೆ.

**ಶ್ರೀ ಬಾಲಕೃಷ್ಣ ಶರ್ಮ :** *[ಇದುವರೆಗೆ ಯಾರೂ ಪ್ರಶ್ನೆ ಕೇಳಿಲ್ಲ. ಆದರೂ, ನನ್ನ ಪ್ರಶ್ನೆಯ ಉದ್ದೇಶ ತಿಳಿಸಲು ತಮ್ಮ ಅಪ್ಪಣೆ ಕೋರುತ್ತೇನೆ, ನಂತರ ಅದರ ಬಗ್ಗೆ ಒಂದು ಚರ್ಚೆ ನಡೆಸಬಹುದು.]*

**ಮಾನ್ಯ ಅಧ್ಯಕ್ಷರು :** *[ತಾವೇನನ್ನು ಕೇಳಲು ಉದ್ದೇಶಿಸಿರುವರೋ ತಿಳಿಯದು. ಮುಂಚೆಯೇ ತಾವು ನನ್ನನ್ನು ಭೇಟಿಯಾಗಿ, ತಮ್ಮ ಉದ್ದೇಶವನ್ನು ತಿಳಿಸಿದ್ದರೆ ನಾನು ತಮಗೆ ಅನುಮತಿ ಕೊಡುತ್ತಿದ್ದೇನೇನೋ. ಈ ಹೊತ್ತು ತಮಗೆ ಮಾತನಾಡಲು ಹೇಗೆ ಅನುಮತಿ ಕೊಡಲಿ ತಿಳಿಯದು.]*

**ಶ್ರೀ ಬಿಶ್ವನಾಥ್ ದಾಸ್** (ಒರಿಸ್ಸ : ಸಾಮ್ರಾನ್ಯ) : ಸನ್ಮಾನ್ಯ ಅಧ್ಯಕ್ಷರೆ, ತಾವು, ಕಾರ್ಯಕ್ರಮ ಸೂಚಿಯಲ್ಲಿರುವ ಇತರ ಬಾಬುಗಳನ್ನು ಚರ್ಚೆಗೆ ತೆಗೆದುಕೊಳ್ಳುವ ಮುನ್ನ, ಉಪಸಮಿತಿ ಶಿಫಾರಸ್ಸಿನ ಸಶಸ್ತ್ರಪಡೆಗಳನ್ನು ಹಂಚುವ ಬಗ್ಗೆ ಸರ್ಕಾರದ ಅಧಿಕೃತ ಪ್ರಕಟಣೆಯನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಮಾನ್ಯರೆ, ಈ ತೀರ್ಮಾನ ಅಂತಿಮವೆಂದು ಹೇಳಲಾಗಿದೆ. ಸಶಸ್ತ್ರಪಡೆಯ ಪುನಾರಚನೆ ಉಪಸಮಿತಿಯ ಶಿಫಾರಸ್ಸಿನ ಮೇಲೆ ಕೋಮುವಾದ ಆಧಾರದ ಮೇಲೆ ಸಿದ್ಧವಾದ ಅಂದಾಜು ನಿರ್ಣಯ ಎಂದು ಹೇಳಲಾಗಿದೆ ಮತ್ತು ನೌಕೆ ಇತ್ಯಾದಿ ಹಂಚಿಕೆಗೆ ಸಂಬಂಧಿಸಿದ್ದು, ಪ್ರತಿಯೊಂದು ಆಧಿಪತ್ಯವನ್ನು ಗಣನೆಗೆ ತೆಗೆದುಕೊಂಡುದಾಗಿ ಹೇಳಲಾಗಿದೆ.

**ಮಾನ್ಯ ಅಧ್ಯಕ್ಷರು :** ಶ್ರೀ ದಾಸ್ ಅವರೆ, ಸದ್ಯದಲ್ಲಿ ಯಾವುದೇ ವೃತ್ತಪತ್ರಿಕೆಯ ಹೇಳಿಕೆಯ ಬಗ್ಗೆ ಸಂವಿಧಾನ ರಚನಾಸಭೆ ಚಿಂತಿಸುತ್ತಿಲ್ಲ. ಏನೇ ಆಗಲಿ ಈ ಹಂತದಲ್ಲಿ ಅದಾಗದು. ಹಾಗಾಗಿ ಆ ಬಗ್ಗೆ ಪ್ರಶ್ನೆ ಏಳುವುದಿಲ್ಲ.

**ಶ್ರೀ ಬಿಶ್ವನಾಥ್ ದಾಸ್ :** ಆ ಹೇಳಿಕೆಯ ಪ್ರಸ್ತುತತೆಯನ್ನು ತಾವು ನಿರ್ಣಯಿಸಬೇಕೆಂದಷ್ಟೆ ತಮ್ಮ ಮುಂದಿಡುತ್ತಿದ್ದೇವೆ. ಇದು ಭಾರತದ ಆಸ್ತಿಗಳ ಹಂಚಿಕೆ ಕುರಿತು ಮುಖ್ಯವಾದ ಪ್ರಶ್ನೆಗಳಿಗೆ ಸಂಬಂಧಿಸಿದುದು. ನಮ್ಮೆಲ್ಲರನ್ನೂ ಆತಂಕಕ್ಕೀಡುಮಾಡಿದೆ. ವಸ್ತುಶಃ ಇದು ನಮ್ಮ ಶಾಸನಸಭೆ ಮತ್ತು ನಮ್ಮ ಸರ್ವತಂತ್ರ ಸ್ವತಂತ್ರ ರಾಷ್ಟ್ರ. ಇದು ಎಲ್ಲರ ತಳಮಳಕ್ಕೆ ಕಾರಣವಾಗಿದೆ.

**ಮಾನ್ಯ ಅಧ್ಯಕ್ಷರು :** ತಾವು ವೃಥಾ ಭೀತರಾಗಿದ್ದೀರಿ ಎಂದೆನಿಸುತ್ತದೆ. ನಾವಿನ್ನೂ ಶಾಸನಸಭೆಯನ್ನು ರಚಿಸಿಲ್ಲ. ಇದುವರೆಗೆ ನಾವು ಸಂವಿಧಾನ ರಚನಾ ಸಭೆಯಂತೆ ಕಾರ್ಯನಿರ್ವಹಿಸುತ್ತಿದ್ದೇವೆ. ಒಂದು ವೇಳೆ ಇದು ಶಾಸನಸಭೆಯಾಗಿದ್ದರೆ, ಪ್ರಾಯಶಃ ತಾವು ಇದನ್ನು ಪ್ರಸ್ತಾಪಿಸಬಹುದಿತ್ತು. ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ ಎಂದುಕೊಂಡಿದ್ದೇನೆ.

**ಶ್ರೀ ಎಚ್.ಆರ್. ಗುರುವರೆಡ್ಡಿ** (ಮೈಸೂರು ರಾಜ್ಯ) : ಮೈಸೂರಿನ ಪ್ರತಿನಿಧಿಗಳ ಪರವಾಗಿ, ವಿಶೇಷವಾಗಿ ಪ್ರಕ್ರಿಯೆ ನಿಯಮಗಳೂ ಸೇರಿದಂತೆ, ಯಾವುದರ ಬಗ್ಗೆಯೂ ನಮಗೆ ಮಾಹಿತಿಪತ್ರದ ಸರಬರಾಜಾಗಿಲ್ಲ. ನಾವು ಕಛೇರಿಗೆ ಈ ಬಗ್ಗೆ ಕೋರಿಕೆ ಸಲ್ಲಿಸಿದ್ದೇವೆ. ಆದರೂ ನಮಗೆ ಇನ್ನೂ ಮಾಹಿತಿಪತ್ರ ಕೈಸೇರಿಲ್ಲ. ಸಭೆಯ ವ್ಯವಹಾರದಲ್ಲಿ ಪಾಲ್ಗೊಳ್ಳಲು ನಾವು ಇಚ್ಛಿಸುತ್ತೇನೆ. ಆದರೆ ಈ ಕಾರಣಕ್ಕಾಗಿಯೇ ನಮಗೆ ಸಾಧ್ಯವಾಗುತ್ತಿಲ್ಲ. ತಾವು ಕಛೇರಿಗೆ ಸೂಕ್ತ ಸೂಚನೆ ನೀಡಬೇಕಾಗಿ ಕೋರುತ್ತೇನೆ.

**ಮಾನ್ಯ ಅಧ್ಯಕ್ಷರು :** ಕಾರ್ಯದರ್ಶಿ ಅದನ್ನು ಕೈಗೆತ್ತಿಕೊಂಡು ಸೂಕ್ತ ಕ್ರಮ ಕೈಗೊಳ್ಳುವರು .

**ಶ್ರೀ ಎಚ್. ಜೆ. ಖಾಂಡೇಕರ್** (ಸಿ. ಪಿ. ಮತ್ತು ಬೆರಾರ್ : ಸಾಮಾನ್ಯ) : ಮಾಹಿತಿಗಾಗಿ, ನಾನು, ಒಂದು ಕ್ರಿಯಾಲೋಪ ಭಾರತೀಯ ರಾಜ್ಯಗಳಿಂದ ತಮ್ಮ ಪರಿಚಯಪತ್ರಗಳನ್ನು ಸಾದರಪಡಿಸಿದ ಪರಿಶಿಷ್ಟ ಜಾತಿ ಸದಸ್ಯರಲ್ಲಿ ಎಷ್ಟು ಮಂದಿ ರಿಜಿಸ್ಟರ್‌ಗೆ ಸಹಿ ಹಾಕಿರುವರೆಂದು ತಿಳಿಯಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು :** ಆ ಪ್ರಶ್ನೆಗೆ ಈ ಕಛೇರಿಯಲ್ಲಿ ಉತ್ತರ ದೊರೆಯಲಾರದು ಎನಿಸುತ್ತೆ. ಪ್ರಾಯಶಃ ಮುಂದೊಂದು ಹಂತದಲ್ಲಿ, ಕಾರ್ಯದರ್ಶಿಗಳಿಂದ ತಮಗೆ ಸಂಪೂರ್ಣ ಮಾಹಿತಿ ದೊರೆಯಬಹುದು.

**ಶ್ರೀ ತಾಜುಮಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ಮಾನ್ಯರೆ, ಇಂದು ಯಾರಾದರೂ ಸದಸ್ಯರು ಸಿಲ್ಹೆಟ್ ಪ್ರತಿನಿಧಿಯಾಗಿ ಇಲ್ಲಿರುವರೆ, ಕೇಳಬಹುದೆ?

**ಶ್ರೀ ಕೆ.ಎಂ. ಸರ್ದಾರ್ ಫಣಿಕ್ಕರ್ :** ಒಂದು ಕ್ರಿಯಾಲೋಪ. ಈ ಸಂವಿಧಾನ ರಚನಾಸಭೆಗೆ ಪ್ರಶ್ನೋತ್ತರ ವೇಳೆ ನಿಗದಿಯಾಗಿದೆಯೇ?

**ಮಾನ್ಯ ಅಧ್ಯಕ್ಷರು :** ಒಂದು ನಿಶ್ಚಿತ ವೇಳೆ ಎಂಬುದಿಲ್ಲ. ನಾನು ಸದಸ್ಯರಿಗೆ ಆ ರಿಯಾಯಿತಿಯನ್ನು ಕೊಟ್ಟಿದ್ದೇನೆ. ಅದರ ದುರುಪಯೋಗಲಾರದೆಂಬ ಭರವಸೆ ಇದೆ.

**ಅಧ್ಯಕ್ಷರ ಭಾಷಣ**

**ಮಾನ್ಯ ಅಧ್ಯಕ್ಷರು :** *[ಗೌರವಾನ್ವಿತ ಸದಸ್ಯರೆ, ಎರಡೂವರೆ ತಿಂಗಳ ನಂತರ ನಾವಿಲ್ಲಿ ಸಭೆ ಸೇರುತ್ತಿದ್ದೇವೆ. ಈ ಅವಧಿಯಲ್ಲಿ ಹಲವಾರು ಪ್ರಮುಖ ಘಟನೆಗಳು ನಡೆದಿವೆ. ಅವುಗಳ ಬಗ್ಗೆ ನಾನು ತಿಳಿಸಬೇಕಿದೆ. ಇವುಗಳಲ್ಲಿ ಅತಿ ಮುಖ್ಯವಾದುದೆಂದರೆ, ಜೂನ್ ತಿಂಗಳ ೩ನೇ ತಾರೀಖು ಮಹಾಪ್ರಭುಗಳ ಸರ್ಕಾರ ನೀಡಿದ ಹೇಳಿಕೆ. ಇದು ಭಾರತೀಯ ರಾಜಕಾರಣದ ಮೇಲೆ ತೀವ್ರ ಪರಿಣಾಮ ಬೀರಿದೆ. ಅದರ ಒಂದು ಫಲಿತಾಂಶವೆಂದರೆ ಭಾರತದ ವಿಭಜನೆ. ಎರಡೂ ಪ್ರಾಂತ್ಯಗಳ ವಿಭಜನೆಗೂ ತೀರ್ಮಾನ ತೆಗೆದುಕೊಳ್ಳಲಾಗಿದೆ. ನಂತರ ಇದರ ಪರಿಣಾಮವಾಗಿ ಚರ್ಚೆಗಳು ನಡೆಯುತ್ತಿವೆ. ನನಗೆ ತಿಳಿದಂತೆ, ಭಾರತ ಸರ್ಕಾರ ಹಾಗೂ ಇತರ ಸಂಬಂಧ ಪಟ್ಟ ಪ್ರಾಂತ್ಯಗಳಲ್ಲಿ ವಿಭಜನೆಯ ವಿವರಗಳನ್ನು ಕುರಿತ ಚರ್ಚೆ ನಡೆಯುತ್ತಿದೆ. ಹಾಗೂ ವಿಭಜನೆಗೆ ಸಂಬಂಧಿಸಿ ಕೆಲಸಗಳೂ ಚಾಲನೆಯಲ್ಲಿವೆ. ಇದರ ಜೊತೆಗೆ, ಈ ಸಂವಿಧಾನ ಸಭೆಯಲ್ಲಿ ಬದಲಾವಣೆಗಳೂ ಆಗಿವೆ. ಈ ಹಿಂದೆ ಬಂಗಾಳ ಮತ್ತು ಪಂಜಾಬ್ ಪ್ರಾಂತ್ಯಗಳನ್ನು/ರಾಜ್ಯಗಳನ್ನು ಪ್ರತಿನಿಧಿಸಿದ ಸದಸ್ಯರ ಬದಲು ಹೊಸ ಸದಸ್ಯರು ಹೊಸ ಚುನಾವಣೆಗಳಲ್ಲಿ ಆಯ್ಕೆಗೊಂಡಿದ್ದಾರೆ. ಜೊತೆಗೆ ಕೆಲ ಭೂತಪೂರ್ವ ಸದಸ್ಯರು ಸಹ ಈ ಎರಡು (ಈಗ ನಾಲ್ಕು) ಪ್ರಾಂತ್ಯಗಳಿಂದ ಆಯ್ಕೆಗೊಂಡಿದ್ದಾರೆ. ಈ ಸಭೆಯಿಂದ ದೂರವಿದ್ದ ಹಲವಾರು ರಾಜ್ಯಗಳು ಈಗ ತಮ್ಮ ಪ್ರತಿನಿಧಿಗಳನ್ನು ಕಳುಹಿಸುತ್ತಿವೆ. ಇದುವರೆಗೆ, ಸಭೆಗೆ ಹಾಜರಾಗದೆ ಇದ್ದ ಮುಸ್ಲಿಮ್ ಲೀಗ್ ಪಕ್ಷದ ಸದಸ್ಯರು ಈಗ ಸಭೆಗೆ ಬರುತ್ತಿದ್ದಾರೆ.

ಸಂವಿಧಾನ ರಚನಾಸಭೆ, ಹಲವಾರು ಉಪಸಮಿತಿಗಳನ್ನು ನೇಮಿಸಿತ್ತು. ಪತ್ರಿಕೆಗಳಲ್ಲಿ ಈ ಉಪಸಮಿತಿ ವರದಿಗಳು ಪ್ರಕಟಗೊಳ್ಳುತ್ತಿವೆ. ಸದಸ್ಯರಿಗೂ ಅವು ತಲುಪುತ್ತಿವೆ. ವರದಿಗಳು ಈಗ ಸಿದ್ಧವಾಗಿರುವಂತೆ, ಸಭೆಯ ಮುಂದೆ ಕಾಲಕಾಲಕ್ಕೆ ಮಂಡಿಸಲ್ಪಡುತ್ತವೆ. ಅವುಗಳ ಬಗ್ಗೆ ತಮ್ಮ ಖಚಿತ ನಿರ್ಧಾರವನ್ನು ತಿಳಿಸುವಂತೆ ಕೋರಲಾಗುವುದು. ಪ್ರಾಂತ್ಯಗಳಿಗೊಂದು ಮಾದರಿ ಸಂವಿಧಾನವನ್ನು ರಚಿಸುವಂತೆ, ಈ ಉಪಸಮಿತಿಗಳ ಲ್ಲೊಂದನ್ನು ನೇಮಿಸಲಾಗಿತ್ತು. ಒಕ್ಕೂಟದ ಸಂವಿಧಾನರಚನೆಯ ನಿಯಮದ ಬಗ್ಗೆ ಕಳೆದ ನಿರ್ಧಾರವನ್ನು ಶಿಫಾರಸ್ಸುಗಳನ್ನು ಮಾಡಲು ಮತ್ತೊಂದು ಉಪಸಮಿತಿ ನೇಮಕಗೊಂಡಿತ್ತು. ಜೊತೆಗೆ ಒಂದು ಸ್ಥೂಲ ರೂಪದ ಸಂವಿಧಾನವನ್ನು ರಚಿಸುವುದು ಅದರ ಕರ್ತವ್ಯ. ಒಕ್ಕೂಟದ ಅಧಿಕಾರವನ್ನು ಪರಿಭಾವಿಸಿ ನಿರ್ಧರಿಸುವ ಮತ್ತು ಸಂಬಂಧಿತ ವರದಿ ನೀಡುವ ಸಲುವಾಗಿ ಮೂರನೇ ಸಮಿತಿಯನ್ನು ನೇಮಕಮಾಡಲಾಯಿತು. ಈ ಎಲ್ಲ ಮೂರು ಉಪಸಮಿತಿಗಳ ವರದಿಗಳು ಈಗ ಸಿದ್ಧಗೊಂಡಿವೆ. ಇವುಗಳಲ್ಲಿ ಒಂದನ್ನು ಸದನದ ಪರಿಶೀಲನೆಗಾಗಿ ಸಾದರ ಪಡಿಸಲಾಗಿದೆ. ಇತರ ಸಮಿತಿಗಳ ವರದಿಯನ್ನು ಮುಂದೆ ಮಂಡಿಸಲಾಗುವುದು, ಈ ಅಧಿವೇಶನದಲ್ಲಿ ಸದನವು ವರದಿಗಳನ್ನು ಸೂಕ್ತವಾಗಿ ಪರಿಶೀಲಿಸಿ ನಿರ್ಣಯ ಕೈಗೊಳ್ಳುವುದೆಂದು ಭಾವಿಸುತ್ತೇನೆ. ನನ್ನದೊಂದು ಸಲಹೆ; ತಾವು ಅನುಮೋದನೆ ದೊರೆತ ನಂತರ ಸವಿವರ ಸಂವಿಧಾನದ ರಚನೆಗೆಂದು ಕೆಲವರನ್ನು ನೇಮಕ ಮಾಡಬಹುದು. ಅದನ್ನೂ ಜಾಗರೂಕತೆಯಿಂದ ಪರಾಮರ್ಶಿಸಲು ಸಮಿತಿಯೊಂದನ್ನು ನೇಮಕ ಮಾಡಬಹುದು. ಮತ್ತು ಸಂವಿಧಾನದ ಬಗ್ಗೆ ತನ್ನ ಅಭಿಪ್ರಾಯವನ್ನು ಸದನದ ಪುನರ್ ಅಧಿವೇಶನದ ಸಂದರ್ಭದಲ್ಲಿ ತಿಳಿಸಬಹುದು ನಂತರ, ಸದನದ ಮುಂದೆ ಸಂವಿಧಾನವನ್ನು ಪರಿಶೀಲನೆ ಮತ್ತು ಅನುಮೋದನೆ ಮಂಡಿಸಲಾಗುವುದು ಈ ರೀತಿ ಸಂವಿಧಾನ ಅಂತಿಮ ರೂಪ ತಾಳುವುದು.

ಸಲಹಾ ಸಮಿತಿ ಎಂಬ ಇನ್ನೊಂದು ಸಮಿತಿ ನೇಮಕಗೊಂಡಿತು. ಆದರೆ ಅದು ತನ್ನ ಕಾರ್ಯ ಇನ್ನೂ ಪೂರೈಸಿಲ್ಲ. ಅದು ಮುಂದೆ ಕಂಡಂತೆ ಉಪಸಮಿತಿಗಳನ್ನು ರಚಿಸಿದೆ– ಅಲ್ಪಸಂಖ್ಯಾತರ ಉಪಸಮಿತಿ, ಮೂಲಭೂತ ಹಕ್ಕುಗಳ ಉಪಸಮಿತಿ, ಬುಡಕಟ್ಟು ಮತ್ತು ಹೊರಗುಳಿದ ಪ್ರದೇಶಗಳ ಉಪಸಮಿತಿ. ಇವು

ಮೊದಲ ಸಮಿತಿಯ ಭಾಗಗಳು. ಇವುಗಳಲ್ಲೊಂದು ಉಪ ಸಮಿತಿ ತನ್ನ ವರದಿಯನ್ನು ಸಲ್ಲಿಸಿದೆ. ಇತರ ಉಪಸಮಿತಿಗಳ ವರದಿಗಳು ಇನ್ನು ಸಿದ್ಧವಿಲ್ಲ . ಅತಿ ಶೀಘ್ರವಾಗಿ ಈ ವರದಿಗಳೂ ಸಲ್ಲಿಸಲ್ಪಡುತ್ತವೆ ಎಂಬ ವಿಶ್ವಾಸ ನನಗಿದೆ. ಇದರಿಂದ ಈ ಮೂರು ವರದಿಗಳ ನಿರ್ಣಯಗಳನ್ನೂ ಶಿಫಾರಸ್ಸುಗಳನ್ನು ಸಂವಿಧಾನದಲ್ಲಿ ನಿಗಮಿತಗೊಳಿಸಬಹುದು. ಅಂತಿಮ ಅನುಮೋದನೆ ಪಡೆದು ಅವು ಸಮಗ್ರ ರೂಪ ತಾಳಬಹುದು.

ಇವೆಲ್ಲವನ್ನೂ ಸೂಕ್ತ ರೀತಿಯಲ್ಲಿ ಪೂರ್ಣಗೊಳಿಸಿದರೆ, ಸಂವಿಧಾನವನ್ನು ಅಂತಿಮವಾಗಿ ಅಂಗೀಕರಿಸಲು ನಮಗೆ ಸಾಧ್ಯವಾಗುತ್ತದೆ. ಅಕ್ಟೋಬರ್ ತಿಂಗಳಲ್ಲಿ ಸಭೆ ಸೇರುವಾಗ ಸಂವಿಧಾನವನ್ನು ಸೂಕ್ತವಾಗಿ ಪರಿಶೀಲಿಸಿದ ನಂತರ ಅಂಗೀಕರಿಸಬಹುದು. ಸಂವಿಧಾನ ರಚನಾಸಭೆಯ ಕಾರ್ಯವನ್ನೂ ತ್ವರಿತಗೊಳಿಸಬೇಕೆಂಬುದು ನನ್ನ ಅಭಿಲಾಷೆ. ಏಕೆಂದರೆ, ಉದ್ದೇಶಿತ ಭಾರತೀಯ ಸ್ವಾತಂತ್ರ್ಯ ಮಸೂದೆಯ ಮೇರೆಗೆ, ಸಂವಿಧಾನ ರಚನಾಸಭೆಯು ಶಾಸನಸಭೆಯಂತೆಯೂ ಕಾರ್ಯನಿರ್ವಹಿಸಲಿದೆ. ಕೆಲ ಕಾಲಾನಂತರ ಆಯವ್ಯಯ ಅಧಿವೇಶನವೂ ನಡೆಯಬೇಕಿದೆ. ಇದರ ಪರಿಣಾಮವಾಗಿ ನಾವು ಸಂವಿಧಾನ ರಚನಾಸಭೆಯ ಕರ್ತವ್ಯಗಳನ್ನು ಶೀಘ್ರದಲ್ಲಿ ಪೂರೈಸಿದರೆ, ಶಾಸನಸಭೆಯ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದು. ಈಗಾಗಲೆ ಶಾಸನಸಭೆಯ ಸಂಬಂಧವಾಗಿ ಇತ್ಯರ್ಥಗೊಳ್ಳಬೇಕಿರುವ ಹಲವಾರು ವಿಷಯಗಳನ್ನು ಪರಿಶೀಲಿಸಬೇಕಿದೆ. ಆದರೆ ಸಂವಿಧಾನ ರಚನಾಸಭೆಯ ಕೆಲಸಗಳನ್ನು ತರಾತುರಿಯಿಂದ ಪೂರೈಸಬೇಕೆಂಬುದು ನನ್ನ ಇಚ್ಛೆಯಲ್ಲ. ಇದರಿಂದ ಕೆಲಸ ಕೆಡುತ್ತೆ. ಪ್ರತಿಯೊಂದು ವಿಷಯವನ್ನು ಸಂಪೂರ್ಣವಾಗಿ ಪರಿಶೀಲಿಸಿ ನಿರ್ಣಯಿಸಬೇಕು, ಲಗುಬಗೆ, ಕೆಲಸಕ್ಕೆ ಕೈಹಚ್ಚಿ, ಬೇಗನೆ ಮುಗಿಸುವುದರಿಂದ ಪರಿಣಾಮ ಒಳ್ಳೆಯದೊ ಕೆಟ್ಟದ್ದೋ ಹೇಗೆಂದು ತಿಳಿಯದಾಗುತ್ತೆ. ಬದಲಿಗೆ, ಪ್ರತಿಯೊಂದು ವಿಷಯವನ್ನೂ ಯೋಗ್ಯ ರೀತಿಯಲ್ಲಿ ಸಮಾಧಾನವಾಗಿ ಪರಿಶೀಲಿಸಲು, ಆದಷ್ಟೂ ಹೆಚ್ಚು ಸಮಯವನ್ನು ವಿನಿಯೋಗಿಸಬೇಕು. ಶಾಸನಸಭೆಯಲ್ಲಿ ಕುಳಿತು ಇದರ ಕಾರ್ಯವನ್ನು ಮಾಡಬೇಕಾದ ಅಗತ್ಯವೆಂದು ಮನಗಂಡು, ಈಗಿನ ಕೆಲಸವನ್ನು ಅದಷ್ಟೂ ಬೇಗನೆ ಮುಗಿಸಬೇಕು.

ನಾನು ಎಲ್ಲ ಸದಸ್ಯರನ್ನೂ ಸ್ವಾಗತಿಸುತ್ತೇನೆ. ಅವರಲ್ಲಿ ಅನೇಕರು ಇಂದು ಉಪಸ್ಥಿತದ್ದಾರೆ, ನಾವೆಲ್ಲರೂ ಒಗ್ಗೂಡಿ ಸಂವಿಧಾನ ರಚನಾಸಭೆಯ ಕರ್ತವ್ಯವನ್ನು ಆದಷ್ಟೂ ಬೇಗನೆ ಪೂರೈಸುವ ಭರವಸೆ ಹೊಂದಿದ್ದೇವೆ. ಸರ್ವಸಮ್ಮತ ಸಂವಿಧಾನವನ್ನು ಸಾದರಪಡಿಸುವ ವಿಶ್ವಾಸ ನನಗಿದೆ.

**ಶ್ರೀ ಎಚ್.ವಿ. ಕಾಮತ್** (ಸಂ.ಪ್ರಾಂ. ಮತ್ತು ಬೆರಾರ್ : ಸಾಮಾನ್ಯ) : *[ಸನ್ಮಾನ್ಯ ಅಧ್ಯಕ್ಷರೆ, ಚುನಾಯಿತ ರಾಜ್ಯ ಪ್ರತಿನಿಧಿಗಳೆಷ್ಟು ಮಂದಿ ಹಾಗೂ ನಾಮನಿರ್ದೇಶಿತರೆಷ್ಟು ಮಂದಿ ತಿಳಿಸಲಾದೀತೆ?]*

**ಮಾನ್ಯ ಅಧ್ಯಕ್ಷರು** : *[ಈಗ ನಾನು ತಿಳಿಸಲಾರೆ. ತಾವು ಕೇಳಿದ ಮಾಹಿತಿ ನಂತರ ತಿಳಿಸಲ್ಪಡುತ್ತೆ]*

## ಚುನಾವಣಾ ಬದಲಾವಣೆ

**ಶ್ರೀ ಶ್ರೀಪ್ರಕಾಶ** (ಸಂ.ಪ್ರಾಂ. ಬಂಗಾಳ ಮತ್ತು ಪಂಜಾಬ್ ಪ್ರಾಂತ್ಯಗಳಿಂದ : ಸಾಮಾನ್ಯ) : *[ಸನ್ಮಾನ್ಯ ಅಧ್ಯಕ್ಷರೆ, ನನಗೆ ತಿಳಿದಂತೆ, ಸಂವಿಧಾನ ರಚನಾಸಭೆಗೆ ಚುನಾವಣೆ ಮಾಡಿದಾಗ ಹೊರಗಡೆ ಯಾವುದೇ ಅಧಿಕಾರ ಚಲಾಯಿಸಿ, ಸಭೆಯ ಮೇಲೆ ನಿಯಂತ್ರಣ ಹೇರಲಾಗದೆಂದು ತಿಳಿಸಲಾಗಿತ್ತು. ಬಂಗಾಲ ಮತ್ತು ಪಂಜಾಬ್ ಪ್ರಾಂತ್ಯಗಳಲ್ಲಿ ಸಂಭವಿಸಿದ ಬದಲಾವಣೆಯನ್ನು ಕುರಿತು ತಮ್ಮ ಸಲಹೆ ಪಡೆಯಲಾಗಿತ್ತೆ ಎಂಬುದನ್ನು ತಿಳಿಯಬಯಸುತ್ತೇವೆ. ಸಭೆಯ ನಿಯಮಾನುಸಾರ ಈ ಬದಲಾವಣೆಗಳು ಜರುಗಿವೆಯೇ? ನನಗೆ ಅರಿವಿದ್ದಂತೆ ಸದಸ್ಯರು ರಾಜೀನಾಮೆ ಸಲ್ಲಿಸುತ್ತಿದ್ದಂತೆ ತಮ್ಮ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾರೆ. ಈಗ ಸದಸ್ಯರಾಗಿಲ್ಲದ ಬಂಗಾಳ ಮತ್ತು ಪಂಜಾಬ್ ಪ್ರಾಂತ್ಯಗಳಿಂದ ಸದಸ್ಯರಿಂದ ನನಗೊಂದು ವಿಷಯ ತಿಳಿಯಬೇಕಿದೆ. ಅವರು ತಮ್ಮ ಸದಸ್ಯತ್ವವನ್ನು ಕಳೆದುಕೊಂಡಿರುವುದು ತಮ್ಮ ರಾಜೀನಾಮೆಯ ಕಾರಣದಿಂದಲೋ ಅಥವಾ ನೂತನ ಚುನಾವಣೆಗಳು ನಡೆಯಲು ಕಾರಣದಾದ ವೈಸ್‌ರಾಯರ ಹೇಳಿಕೆಯಿಂದಲೋ. ಇದು ವಾಸ್ತವ ಸಂಗತಿಯಾಗಿದ್ದರೆ

ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಯಬಯಸುತ್ತೇನೆ. ಇವೆಲ್ಲವೂ ಕ್ರಮಬದ್ಧವೆಂದು ತಮಗನಿಸುವುದೆ ಅಥವಾ ಇಲ್ಲವೆ ತಿಳಿಯಬೇಕಿದೆ. ಒಮ್ಮೆ ಸಂವಿಧಾನಸಭೆ ರಚನೆಯಾಯಿತೆಂದರೆ ಅದರ ಸಂವಿಧಾನದಲ್ಲಿ ಯಾವುದೇ ಬದಲಾವಣೆಗಳನ್ನೂ ಮಾಡಲಾಗದೆಂದೂ, ಹೊರಗಣ ಅಧಿಕಾರದಿಂದ ಅದನ್ನು ನಿಯಂತ್ರಿಸಲಾಗದೆಂದೂ ನಮಗೆ ತಿಳಿಸಲಾಗಿತ್ತು. ಇವೆಲ್ಲ ಬದಲಾವಣೆಗಳೂ ವೈಸರಾಯರ ಹೇಳಿಕೆಯ ಅನುಸಾರ ನಡೆದಿದೆ ಎಂದು ನನಗನಿಸುತ್ತೆ. ಇದೊಂದು ಸೂಕ್ತವಲ್ಲದ, ನ್ಯಾಯಸಮ್ಮತಲ್ಲದ, ಕಾನೂನುಬಾಹಿರವಾದ ನಿಯಮೋಲ್ಲಂಘನೆ.]*

**ಸನ್ಮಾನ್ಯ ಅಧ್ಯಕ್ಷರು :** *[ಈ ಬದಲಾವಣೆಗಳು ವೈಸರಾಯರ ಹೇಳಿಕೆಯ ಪರಿಣಾಮದಿಂದ ಆದವು. ಮತ್ತು ಅದರಿಂದಲೇ ಅವರಿಂದ ಮುಂದಿನ ಕ್ರಮ ಕೈಗೊಳ್ಳಲಾಯಿತೆಂಬ ತಮ್ಮ ಹೇಳಿಕೆ ಸರಿಯಾದುದು; ಆದರೆ ಈ ಬದಲಾವಣೆಯನ್ನು ಕುರಿತು ಪ್ರತಿಯೊಬ್ಬರು ಸಮ್ಮತಿಸಿದ್ದಾರೆ; ಅಂತೆಯೇ ನಾವೂ ಸಹ ಎಂಬುದು ನನ್ನ ನಂಬಿಕೆ. ಆದುದರಿಂದ, ಅದು ಅಕ್ರಮ, ಅಮಾನ್ಯವೆಂಬ ಪ್ರಶ್ನೆ ಏಳುವುದಿಲ್ಲ. ಮೇಲಾಗಿ, ಭೂತಪೂರ್ವ ಚುನಾಯಿತ ಸದಸ್ಯರು, ತಮ್ಮ ಸದಸ್ಯತ್ವವನ್ನು ಕಳೆದುಕೊಂಡುದರ ಬಗ್ಗೆ ಯಾರೊಬ್ಬ ಸದಸ್ಯರು, ಆಕ್ಷೇಪಿಸಿ ಮನವಿಪತ್ರ ಸಲ್ಲಿಸಲ್ಲ. ಹೊಸದಾಗಿ ಚುನಾಯಿತರಾದವರು ಈ ಸಭೆಯ ಸದಸ್ಯರು. ಅವರು ಸಭೆಯ ವ್ಯವಹಾರಗಳಲ್ಲಿ ಭಾಗವಹಿಸುತ್ತಾರೆ.]*

**ಶ್ರೀ ಬಾಲಕೃಷ್ಣ ಶರ್ಮ :** *[ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಹೇಳಿಕೆಯಿಂದ ವ್ಯಕ್ತವಾಗುವ ಒಂದು ಅಂಶದ ಕಡೆ ಸದನದ ಗಮನ ಸೆಳೆಯಬಯಸುತ್ತೇನೆ. ತಮ್ಮ ಪ್ರಾರಂಭಿಕ ಹೇಳಿಕೆಯಲ್ಲಿ ಹೊಸ ಸದಸ್ಯರನ್ನು ಸ್ವಾಗತಿಸಿದ್ದೀರಿ. ಈ ಸಭೆಯ ವ್ಯವಹಾರಗಳಿಗೆ ಅವರೆಲ್ಲ ತಮ್ಮ ಕೊಡುಗೆ ನೀಡುವ ವಿಶ್ವಾಸ ವ್ಯಕ್ತಪಡಿಸಿದ್ದೀರಿ. ನಮ್ಮ ಭಾರತಕ್ಕೆ ಅಂತಹ ಒಂದು ಸಂವಿಧಾನ ರಚಿಸಲು ನೆರವಾಗುತ್ತಾರೆ....

**ಮಾನ್ಯ ಅಧ್ಯಕ್ಷರು :** *[ತಾವು ಭಾಷಣ ಮಾಡ್ತಿದೀರೋ ಅಥವಾ ಪ್ರಶ್ನೆ ಕೇಳ್ತಿದ್ದೀರೋ.

**ಶ್ರೀ ಬಾಲಕೃಷ್ಣ ಶರ್ಮ :** *[ಸರ್ ನಾನು ಪ್ರಶ್ನೆ ಕೇಳುತ್ತಿದ್ದೀನಿ]*

**ಮಾನ್ಯ ಅಧ್ಯಕ್ಷರು :** *[ದಯವಿಟ್ಟು ಈಗ ಪ್ರಶ್ನೆ ಕೇಳಿ]*

**ಶ್ರೀ ಬಾಲಕೃಷ್ಣ ಶರ್ಮ :** *[ನನ್ನ ಪ್ರಶ್ನೆ ಇಷ್ಟೆ. ತಾವು ಈ ಭರವಸೆಯನ್ನು ವ್ಯಕ್ತಪಡಿಸಿದಾಗ ಒಂದು ವಿಷಯ ನಿಮ್ಮ ಗಮನಕ್ಕೆ ಬಾರದೆ ಇರದು. ಕೆಲ, ಗಮನಾರ್ಹ ಸಂಖ್ಯೆಯ ಸದಸ್ಯರ ಚುನಾವಣೆ ಒಂದು ವಿಶೇಷ ಪ್ರಕ್ರಿಯೆ ಮೂಲಕ ಜರುಗಿದೆ. ಅವರು ದ್ವಿರಾಷ್ಟ್ರ ಸಿದ್ಧಾಂತದಲ್ಲಿ ನಂಬಿಕೆಯಿಟ್ಟು ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ.]*

**ಮಾನ್ಯ ಅಧ್ಯಕ್ಷರು :** *[ನೀವು ಭಾಷಣಕ್ಕೆ ಶುರು ಹಚ್ಚಿದ್ದೀರಿ; ಅಥವಾ ಪ್ರಶ್ನೆ ಕೇಳುತ್ತಿದ್ದೀರೋ ಹೇಗೆ?]*

**ಶ್ರೀ ಬಾಲಕೃಷ್ಣ ಶರ್ಮ :** *[ದ್ವಿರಾಷ್ಟ್ರ ಸಿದ್ಧಾಂತದ ಮೇಲೆ ಚುನಾಯಿತರಾದವರು ತಮ್ಮ ತತ್ತ್ವಕ್ಕೆ ತಿಲಾಂಜಲಿ ಇತ್ತು ನಿಮ್ಮೊಡನೆ ಸಹಕರಿಸುವುದಾಗಿ ಮಾತು ಕೊಟ್ಟಿದ್ದಾರಾ]*

**ಮಾನ್ಯ ಅಧ್ಯಕ್ಷರು :** *[ಶ್ರೀ ದೇಶಬಂಧು ಗುಪ್ತ ಅವರು ಇಂತಹುದೇ ಪ್ರಶ್ನೆ ಎತ್ತಿದ್ದರು. ಉಚಿತ ರೀತಿಯಲ್ಲಿ ಚುನಾಯಿತರಾದ ಸದಸ್ಯರನ್ನು ಸಭೆಯಲ್ಲಿ ಭಾಗವಹಿಸದಂತೆ ತಡೆಯಲು ನನಗೆ ಅಧಿಕಾರವಿಲ್ಲವೆಂದು ಹೇಳಿದ್ದೆ. ಅವರಿಂದ ನಾನು ಯಾವುದೇ ಆಶ್ವಾಸನೆಯಲ್ಲಿ ಕೋರಲಿಲ್ಲ; ಅವರು ಕೊಡಲೂ ಇಲ್ಲ. ಯಾರೆಲ್ಲ ಸೂಕ್ತ ಪ್ರಕ್ರಿಯೆಗೆ ಒಳಪಟ್ಟು ಚುನಾಯಿತರಾಗಿದ್ದಾರೋ ಅವರನ್ನು ನಾನು ಅಂಗೀಕರಿಸಿದ್ದೇನೆ. ಆ ಭರವಸೆಯ ಮೇಲೆ ನಾವು ಕಾರ್ಯಪ್ರವೃತ್ತರಾಗಿದ್ದೇವೆ. ನೀವೆಲ್ಲ ಇಲ್ಲಿ ಏನು ಮಾಡುತ್ತಿರೋ, ಅದು ನಿಮ್ಮಲ್ಲಿ ಪ್ರತಿಯೊಬ್ಬರ ಹಾಗೂ ಎಲ್ಲರ ಉದ್ದೇಶವನ್ನು ನಿರೂಪಿಸುತ್ತದೆ.

**ಓರ್ವ ಗೌರವಾನ್ವಿತ ಸದಸ್ಯ :** ಮಾನ್ಯರೆ, ತಾವು ಹಿಂದಿಯಲ್ಲಿ ಕೊಟ್ಟ ಉತ್ತರ ನಮಗೆ ಅರ್ಥವಾಗಲಿಲ್ಲ.

**ಮಾನ್ಯ ಅಧ್ಯಕ್ಷರು :** ಪ್ರಶ್ನೆ ಕೇಳಿದ್ದು ಹಿಂದಿಯಲ್ಲಿ. ನಾನು ಹಿಂದಿಯಲ್ಲಿ ಉತ್ತರಿಸಬೇಕು. ಯಾರಾದರೂ

ಇಂಗ್ಲಿಷ್‌ನಲ್ಲಿ ಪ್ರಶ್ನೆ ಹಾಕಿದರೆ ನಾನು ಇಂಗ್ಲಿಷ್‌ನಲ್ಲಿ ಉತ್ತರಿಸುವೆ.

**ಪಂಡಿತ್ ಗೋವಿಂದ್ ಮಾಳವೀಯಾ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ಒಂದಂಶದ ಸ್ಪಷ್ಟೀಕರಣಕ್ಕಾಗಿ ನಾನೊಂದು ಪ್ರಶ್ನೆ ಕೇಳಬೇಕೆಂದಿದ್ದೇನೆ. ನನ್ನ ಗೌರವಾನ್ವಿತ ಮಿತ್ರರಾದ ಮಾನ್ಯ ಶ್ರೀಪ್ರಕಾಶ ಒಂದು ಪ್ರಶ್ನೆಯನ್ನೆತ್ತಿದ್ದಾರೆ. ಅದೆಂದರೆ ಇದೊಂದು ಸರ್ವತಂತ್ರ ಸ್ವತಂತ್ರವಾದ ಸಂವಿಧಾನ ರಚನಾಸಭೆ. ಈ ಹಿಂದೆ ಚುನಾಯಿತರಾದ ಸದಸ್ಯರು ರಾಜೀನಾಮೆ ನೀಡದಿರುವಾಗ, ಮಿಕ್ಕವರು ಅವರನ್ನು ಸ್ಥಾನಪಲ್ಲಟಗೊಳಿಸಿದ್ದು ಹೇಗೆ? ತಾವು ಅಪ್ಪಣೆ ಕೊಡಿಸಿದಂತೆ, ಪ್ರತಿಯೊಬ್ಬರೂ ಈ ಬದಲಾವಣೆಗೆ ಪ್ರತಿಯಾಗಿ ಸೊಲ್ಲೆತ್ತದೆ ಹೊಂದಿಕೊಂಡಿರುವುದರಿಂದ, ಅದು ಸರಿಯಷ್ಟೆ. ನಾನು ನಿಮ್ಮಿಂದ ಸ್ಪಷ್ಟನೆ ಬಯಸುವ ಅಂಶ ಇಷ್ಟೆ. ರಾಷ್ಟ್ರದ ಯಾವುದೇ ಭಾಗಗಳು ಒಕ್ಕೂಟ ತೊರೆದು ಹೊರನಡೆದರೆ ಅಥವಾ ಪ್ರತ್ಯೇಕಗೊಂಡರೆ, ಸಂತೋಷದಿಂದಲೋ, ಸಖೇದವೋ ಇವೆರಡೂ ಪ್ರಾಂತ್ಯಗಳು ತಮ್ಮ ಮತಗಳ ಮುಖೇನ ನಿರ್ಣಯಿಸಿದಂತೆ, ನಿರ್ಗಮಿಸಿದರೆ ಅಂತಹ ಸನ್ನಿವೇಶದಲ್ಲಿ, ಆಯಾ ರಾಜ್ಯಗಳು/ಪ್ರಾಂತ್ಯಗಳ ನಿರ್ಗಮನದಿಂದ ಅವುಗಳ ಸದಸ್ಯರು ಸಭೆಯ ಸದಸ್ಯರಾಗಿ ಉಳಿಯಲಾರರೆಂದೆ ಅಥವಾ ಅಲ್ಲವೆಂದೆ? ಈ ಅಂಶಕ್ಕೆ ನನಗೆ ಸ್ಪಷ್ಟೀಕರಣ ಬೇಕು. ಏಕೆಂದರೆ, ಮುಂದೆ ಇದು ನಮಗೆ ಮುಖ್ಯವಾಗುತ್ತದೆ. ಸದ್ಯಕ್ಕೆ ರಾಷ್ಟ್ರದ ಯಾವುದೇ ಭಾಗ ಭಾರತದ ಅವಿಭಾಜ್ಯ ಅಂಗವಾಗಿ ಉಳಿಯಲು ಇಚ್ಛಿಸದಿದ್ದರೆ, ಆ ಭಾಗ ಈ ಸಭೆಯಲ್ಲಿ ಅನುಭವಿಸುವ ಎಲ್ಲ ಹಕ್ಕುಗಳನ್ನು ಕಳೆದುಕೊಳ್ಳುತ್ತದೆ.

**ಮಾನ್ಯ ಅಧ್ಯಕ್ಷರು :** ನಾನು ಅರ್ಥಮಾಡಿಕೊಂಡಂತೆ, ಹಾಗೆ ಹೊರ ಹೋಗುವ ಯಾವುದೇ ಪ್ರಾಂತ್ಯದ ಸದಸ್ಯ ಇಲ್ಲಿ ಕೂರಲು ಹಕ್ಕುಗಳುಳ್ಳವನಲ್ಲ. ಅಂತಹ ಸದಸ್ಯರಾರೂ ಇಲ್ಲಿರುವಂತೆ ನನಗೆ ತೋರುವುದಿಲ್ಲ.

**ಶ್ರೀ ಎಚ್.ಜೆ. ಖಾಂಡೇಕರ್ :** ಶ್ರೀ ಸಿಧ್ವಾ?

**ಸನ್ಮಾನ್ಯ ಅಧ್ಯಕ್ಷರು :** ಶ್ರೀ ಸಿಧ್ವಾ ತಮ್ಮ ಪ್ರತಿನಿಧಿ [ನಗೆ] ನಿಮ್ಮ ಸಂ.ಪ್ರಾಂ. ಮತ್ತು ಬೆರಾರ್‌ನಿಂದ ಆಯ್ಕೆಗೊಂಡವರು.

## ಬರ್ಮಾ ಸಂವಿಧಾನ ರಚನಾಸಭೆಯ ಅಧ್ಯಕ್ಷರಿಂದ ಸಂದೇಶ.

**ಮಾನ್ಯ ಅಧ್ಯಕ್ಷರು :** ಈಗ ಸಭೆಯ ವ್ಯವಹಾರದ ಮುಂದಿನ ಬಾಬು: ಬರ್ಮಾ ಸಂವಿಧಾನ ರಚನಾಸಭೆಯ ಅಧ್ಯಕ್ಷರಿಂದ ನಾವು ಕಳುಹಿಸಿದ ಸಂದೇಶಕ್ಕೆ ಉತ್ತರವಾಗಿ ನಮಗೆ ಸಂದೇಶ ಬಂದಿದೆ, ಸಂದೇಶ ಸಭೆಗೆ ಸಂತಸ ತರುತ್ತದೆ ಎಂದು ಭಾವಿಸುತ್ತೇನೆ.

"ತಮ್ಮ ಸದ್ಭಾವನೆಯ, ಸದಾಶಯದ ಸಂದೇಶ, ಸಂವಿಧಾನ ರಚನಾಸಭೆಯ ಹಾಗೂ ರಾಷ್ಟ್ರದ ಪ್ರಶಂಸೆಗೆ ಪಾತ್ರವಾಗಿದೆ. ತಮಗೆ, ಬರ್ಮಾ ಸಂವಿಧಾನ ರಚನಾಸಭೆಯ ಪರವಾಗಿಯೂ ಮತ್ತು ನನ್ನ ಪರವಾಗಿಯೂ, ಎದೆತುಂಬಿದ ಕೃತಜ್ಞತೆ ಸಲ್ಲಿಸಲು ಆಶಿಸುತ್ತೇನೆ. ನಮ್ಮ ಕಾರ್ಯಕಲಾಪಗಳ ಪ್ರಾರಂಭದಲ್ಲಿ ಇಂತಹ ಆತ್ಮೀಯವಾದ ಪ್ರಾಮಾಣಿಕ ಶುಭ ಸಂದೇಶ ತಮ್ಮಿಂದಲೂ, ಭಾರತ ಸಂವಿಧಾನಸಭೆಯ ಸದಸ್ಯರಿಂದಲೂ ಸಂದಿರುವುದು, ಸ್ವತಂತ್ರ ಐಕ್ಯ ಬರ್ಮಾ ದೇಶಕ್ಕಾಗಿ ಸಂವಿಧಾನರಚನಾ ಪ್ರಕ್ರಿಯೆಗೆ ಸ್ಫೂರ್ತಿಯ ಸೆಲೆಯಾಗಿ ಪ್ರೋತ್ಸಾಹದಾಯಕವಾಗಿ ಪರಿಣಮಿಸಿದೆ. ನಾನು ತಮಗೆ ಆಶ್ವಾಸನೆ ಕೊಡುತ್ತೇನೆ. ತಮ್ಮ ರಾಷ್ಟ್ರದೊಡನೆ ಆತ್ಮೀಯ, ಸ್ನೇಹಪೂರ್ವಕ ಸಂಬಂಧ ಹೊಂದುವುದು ನಮ್ಮ ಕರ್ತವ್ಯ ಹಾಗೂ ಹಕ್ಕೆಂದು ಭಾವಿಸುತ್ತೇನೆ ವಿಶ್ವಶಾಂತಿಗೆ ನಮ್ಮೆಲ್ಲರ ಕೊಡುಗೆ ಸಲ್ಲುವುದನ್ನು ಸಾಧ್ಯಗೊಳಿಸುತ್ತೇವೆ.

ನಮ್ಮ ಸಂವಿಧಾನಿಕ ಸಲಹಾಕಾರರು ನವದೆಹಲಿಯಲ್ಲಿ ಮೊಕ್ಕಾಂ ಹೂಡಿದ ಅಲ್ಪಾವಧಿಯಲ್ಲಿ ನೀಡಲಾದ ತಮ್ಮೆಲ್ಲ ಒಳ್ಳೆಯ ನೆರವು ಮತ್ತು ಸಹಕಾರಕ್ಕಾಗಿ ತಮಗೂ ಸರ್ ಬಿ.ಎನ್. ರಾವ್ ಅವರಿಗೂ ಧನ್ಯವಾದಗಳನ್ನು ಸಮರ್ಪಿಸಲು ಈ ಸದವಕಾಶವನ್ನು ಬಳಸಿಕೊಳ್ಳುತ್ತಿದ್ದೇವೆ. ನಮ್ಮ ಕಾರ್ಯದಲ್ಲಿ ಒದಗುವ ತಮ್ಮ ಅಮೂಲ್ಯ ಪ್ರಕಟಣೆಗಳನ್ನು ಉಚಿತವಾಗಿ ಕೊಟ್ಟಿದ್ದೀರಿ. ಧನ್ಯವಾದಗಳು.

ಸ್ವತಂತ್ರ್ಯ ಐಕ್ಯ ಭಾರತದೇಶ ಕಟ್ಟುವ ಗುರಿ ಸಾಕಾರಗೊಳ್ಳಲು ತಮ್ಮೆಲ್ಲರ ಶ್ರಮ ಫಲೀಕೃತವಾಗಲೆಂದು, ಬರ್ಮಾದ ಸಂವಿಧಾನ ರಚನಾಸಭೆ ಹಾಗೂ ಬರ್ಮಾ ಜನತೆಯ ಪರವಾಗಿ ತಮಗೆ ತಮ್ಮ ಮೂಲಕ ಭಾರತ ಸಂವಿಧಾನ ರಚನಾಸಭೆಗೆ ಹಾಗೂ ಭಾರತದ ಜನತೆಗೆ ನಮ್ಮ ಹಾರ್ದಿಕ ಶುಭಹಾರೈಕೆಯನ್ನು ಈ ಸಂದೇಶದ ಮೂಲಕ ಸಲ್ಲಿಸುತ್ತೇನೆ. (ಹರ್ಷೋದ್ಗಾರ)

## ವ್ಯವಹಾರ ಸಮಿತಿಯ ಆದೇಶದ ವರದಿ

**ಮಾನ್ಯ ಸಭಾಧ್ಯಕ್ಷರು :** ಮುಂದೆ ಶ್ರೀ ಮುನ್ಷಿಯವರು ಪ್ರಸ್ತಾವವನ್ನು ಮಂಡಿಸುತ್ತಾರೆ.

**ಮಿ. ಕೆ. ಎಂ ಮುನ್ಷಿ :** ಸರ್ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ದಿನಾಂಕ ೨೫, ಜನವರಿ ೧೯೪೭ರಂದು ಸಭೆಯ ನಿರ್ಣಯದ ಮೇರೆಗೆ ನೇಮಕಗೊಂಡ ವ್ಯವಹಾರ ಸಮಿತಿಯ ಆದೇಶದ ಮುಂದುವರೆದ ವರದಿಯನ್ನು ಸಂವಿಧಾನ ರಚನಾಸಭೆ ಪರಿಶೀಲಿಸುವಂತೆ ನಿರ್ಣಯಿಸಲಾಗಿದೆ.

ಮಾನ್ಯರೆ, ವ್ಯವಹಾರ ಸಮಿತಿಯ ಆದೇಶದ ಈ ವರದಿಯನ್ನು ಪ್ರಸ್ತಾಪಿಸಲು ನನಗೆ ಅತೀವ ಸಂತೋಷವಾಗುತ್ತದೆ. ಸಭೆಯ ಹಿಂದಿನ ಅಧಿವೇಶನದಲ್ಲಿ ಮಂಡಿಸಿದ ವರದಿಗಿಂತ ಈ ವರದಿ ಭಿನ್ನವಾಗಿದೆ ಎಂಬುದನ್ನು ಸದನ ಮನಗಾಣಬಹುದು. ಕಳೆದ ಅಧಿವೇಶನದಿಂದ ಇಲ್ಲಿಯವರೆಗೆ ರಾಷ್ಟ್ರದಲ್ಲಿ ಹಲವಾರು ಬದಲಾವಣೆಗಳು ತಲೆದೋರಿವೆ. ಇದರ ಪರಿಣಾಮವಾಗಿ, ಈ ವರದಿ ಅಗತ್ಯವೆನಿಸುತ್ತದೆ. ಭಾರತದ ಕೆಲವು ಭಾಗಗಳು ರಾಷ್ಟ್ರದಿಂದ ಪ್ರತ್ಯೇಕಗೊಂಡಿವೆ. ಅಂತೆಯೇ ಸಂವಿಧಾನ ರಚನಾಸಭೆಯ ಅಧಿಕಾರವ್ಯಾಪ್ತಿಯಿಂದ ದೂರ ಉಳಿದಿವೆ. ಈ ವಾರಾಂತ್ಯದಲ್ಲಿ ಬ್ರಿಟಿಷ್ ಸಂಸತ್‌ಸಭೆ ಶಾಸನವೊಂದನ್ನು ಅಂಗೀಕರಿಸುತ್ತದೆ. ಅದರಂತೆ ದಿನಾಂಕ ೧೫ ಆಗಸ್ಟ್ ೧೯೪೭ಕ್ಕೆ ಭಾರತವನ್ನು ಬ್ರಿಟಿಷ್ ಆಳ್ವಿಕೆಯಿಂದ ಬಿಡುಗಡೆ ಮಾಡಲಾಗುವುದು. ಇದು ನಾವು ಶತಮಾನಗಳಿಂದ ನಿರೀಕ್ಷಿಸುತ್ತಿರುವ ಘಟನೆ. ಅಂತಿಮವಾಗಿ ಮೇ ೧೬ರಂದು ಯೋಜನೆಯಂತೆ, ಸಂವಿಧಾನ ರಚನಾಸಭೆಯ ಮೇಲೆ ಹೇರಲಾದ ನಿರ್ಬಂಧಗಳು ತೊಲಗುತ್ತದೆ. ಹೊಸದಾಗಿ ಉದ್ಭವಿಸಿರುವ ಸನ್ನಿವೇಶವನ್ನು ಎದುರಿಸಲು ಈ ಸಂವಿಧಾನಸಭೆಯ ಕಾರ್ಯಕ್ರಮಗಳು ಪುನಃ ನಿರ್ದೇಶಿತಗೊಳ್ಳಬೇಕೆಂದು, ಈ ಬದಲಾವಣೆಗಳು ಅಗತ್ಯಪಡಿಸುತ್ತವೆ.

ಮಾನ್ಯರೇ, ಎಲ್ಲ ಕಾರ್ಯಸಾಧ್ಯ ಉದ್ದೇಶಗಳಿಗೆ, ಮೇ ೧೬ರ ಯೋಜನೆ ನಿರರ್ಥಕವಾಗುತ್ತದೆ ಯೆಂಬುದನ್ನು ನಾನು ಸಭೆಯ ಗಮನಕ್ಕೆ ತರಲು ಬಯಸುತ್ತೇನೆ. ನಮ್ಮದು ಸಾರ್ವಭೌಮ ಒಕ್ಕೂಟ ನಾವೀಗ ಸಂಪೂರ್ಣ ಮುಕ್ತ ವಾತಾವರಣದಲ್ಲಿದ್ದು ಭವಿಷ್ಯದ ಸಂವಿಧಾನದ ಪುನಾರಚನೆಗೆ ತೊಡಗುವ ದಿಸೆಯಲ್ಲಿ ಮುನ್ನಡೆಯಬೇಕಿದೆ. ವರದಿಯ ಕಂಡಿಕೆಯೊಂದರಲ್ಲಿ, ಸವಿವರ ಬದಲಾವಣೆಯ ಉಲ್ಲೇಖವಿರುವುದನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಮೇ ೧೬ರ ಯೋಜನೆಯ ಧ್ಯೇಯ, ಏನೇ ಬರಲಿ ರಾಷ್ಟ್ರದ ಐಕಮತ್ಯ ಸಾಧಿಸುವುದು ಒಗ್ಗಟ್ಟು ಸಾಧನೆಯ ವಧಾಸ್ಥಾನದಲ್ಲಿ, ಬಲವಾದ ಕೇಂದ್ರ ಸರ್ಕಾರದ ಸಭೆಯಾದದ್ದು ಮೇ ೧೬ರ ಯೋಜನೆಯಿಂದ. ನಮ್ಮಲ್ಲಿ ಅನೇಕರು ಯೋಜನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇಂತಹ ಐಕಮತ್ಯ, ದುರ್ಬಲಗೊಂಡ ಅಲ್ಪಾಯು ಎಂದು ಮನವರಿಕೆಯಾಯಿತು. ಮೇ ೧೬ರ ಯೋಜನೆಯ ಆಲೋಚನೆಯಂತೆ ೨ ಹಂತಗಳಿವೆ ಒಂದು ಪ್ರಾರಂಭಿಕ ಹಂತ, ಮತ್ತೊಂದು ಒಕ್ಕೂಟದ ಸಂವಿಧಾನ ರಚನಾಸಭೆಯ ಹಂತ. ಸದನದ ಕೃಪೆಯಿಂದ ಹಲವಾರು ಸಮಿತಿಗಳು ನೇಮಕಗೊಂಡವು. ಅವು ಹೆಸರಿಗೆ ಅನ್ವರ್ಥವಾಗುವಂಥ ಬಲಿಷ್ಠ ಭಾರತ ಸರ್ಕಾರವನ್ನು ಪಡೆಯಲು ಶ್ರಮವಹಿಸಿದುವು. ಶ್ರಮ ಸಾರ್ಥಕವಾಗಲಿಲ್ಲ, ಹೋರಾಟ ಸಫಲವಾಗಲಿಲ್ಲವೆಂದು ಬಿಚ್ಚುಮನಸ್ಸಿನಿಂದ ಒಪ್ಪಿಕೊಳ್ಳುತ್ತಿದ್ದೇನೆ. ನನ್ನ ಭಾವನೆಗಳನ್ನು ತೆರೆದ ಮನಸ್ಸಿನಿಂದ ಬಿಚ್ಚಿಡುವುದಾದರೆ ಮೇ ೧೬ರ ಯೋಜನೆಯನ್ನು ಪುನಃ ಪುನಃ

ಅವಲೋಕಿಸಿದಾಗ ನನಗನಿಸಿದ್ದು ಇದೊಂದು ಪುರಾತನ ರೋಮನ್ ಕಾನೂನು ಅನ್ವೇಷಿಸಿದ, ಸಮೀಪ ಬಂಧುವೊಬ್ಬರ ಹತ್ಯೆಯ ಸಂಚಷ್ಟೆ (Parricides bag). ತಮಗೆ ಗೊತ್ತಿರುವಂತೆ ಪ್ರಾಚೀನ ರೋಂ ದೇಶದ ಕಾನೂನಿನಂತೆ ಯಾರಾದರೊಬ್ಬ ವ್ಯಕ್ತಿ ಹೇಯಕೃತ್ಯವೆಸಗಿದರೆ, ಆತನನ್ನು ಬಿಗಿದು ಚೀಲದೊಳಗಿಟ್ಟು ಜೊತೆಯಲ್ಲಿ ಒಂದು ಕರಿ ಹಾವು ಮತ್ತು ಹುಂಜವನ್ನಿಟ್ಟು ಟೈಬರ್ ನದಿಗೆ ಎಸೆಯುತ್ತಿದ್ದರು. ಅದು ತಂತಾನೆ ಮುಳುಗುತ್ತಿತ್ತು.

## ಪರಿಶಿಷ್ಟ*

ಯೋಜನೆಯನ್ನು ಅವಲೋಕಿಸಿದಷ್ಟೂ ತೀವ್ರವಾಗಿ ಅಲ್ಪಸಂಖ್ಯಾತರು ಬಂಧನದಿಂದ ಕಳಚಿಕೊಳ್ಳುವ ತಮ್ಮ ಮುಖ್ಯ ಹಕ್ಕುಗಳಿಗಾಗಿ ಹಪಹಪಿಸುವ ಪ್ರವೃತ್ತಿ ಎದ್ದುತೋರುತ್ತಿತ್ತು. ಜೋರು ಬಹುಮತದ ವಾಕ್ಯಖಂಡ ಅಸ್ತಿತ್ವವನ್ನೆ ವಿಷಪೂರಿತಗೊಳಿಸುತ್ತಿತ್ತು. ಮಿಕ್ಕ ಸದಸ್ಯರ ಭಾವನೆಗಳು ಏನೇ ಇರಲಿ, ದೇವರ ದಯೆಯಿಂದ ನಾವು ಈ ಮೃತ್ಯುಪಾಶದಿಂದ ಕೊನೆಗೂ ಹೊರಬಂದಿದ್ದೇವೆ. ಯೋಜನೆಯ ಅಡಿಯಲ್ಲಿ ವರ್ಗ ಸಮೂಹಗಳನ್ನು ಪರಿಶೀಲಿಸುವ ಅಗತ್ಯ ಈಗ ನಮಗಿಲ್ಲ. ಅದು ಆಲೋಚಿಸಿದಂತೆ ನೀಳ್‌ಪ್ರಕ್ರಿಯೆಗೆ ಆಸ್ಪದವಿಲ್ಲ ಜೋಡು ಬಹುಮತ ವಾಕ್ಯಖಂಡವಿಲ್ಲ. ಉಳಿಕೆ ಅಧಿಕಾರವುಳ್ಳ ಪ್ರಾಂತ್ಯಗಳು ಇನ್ನಿಲ್ಲ, ಹೊರಗಡೆಯುವ ಆಯಕ್ಕೆ ಇಲ್ಲ; ೧೦ ವರ್ಷಗಳ ನಂತರ ಪುನರೀಕ್ಷಣೆಯ ಅಗತ್ಯವಿಲ್ಲ, ಕೇಂದ್ರಕ್ಕೆ ಕೇವಲ ನಾಲ್ಕೇ ವರ್ಗದ ಅಧಿಕಾರಗಳೆಂಬ ಮಿತಿ ಇಲ್ಲ ಆದುದರಿಂದ ನಮ್ಮದೇ ಆಯ್ಕೆಯ ಫೆಡೆರೇಷನ್ ರಚಿಸುವ ಸ್ವಾತಂತ್ರ್ಯ ನಮಗಿದೆ. ನಾವು ಬಯಸಿದ ಬಲಿಷ್ಠ ಕೇಂದ್ರ ಸರ್ಕಾರವಿರುತ್ತದೆ. ನಿಜ ಅದರ ಅಸ್ತಿತ್ವ ಷರತ್ತುಬದ್ಧವಾಗಿರುತ್ತದೆ. ನಾಲ್ಕು ವರ್ಗಗಳ ಅಧಿಕಾರದ ನೆಲೆಗಟ್ಟಿನ ಮೇಲೆ ಈ ಮಹತ್ಕಾರ್ಯದಲ್ಲಿ ಭಾರತೀಯ ರಾಜ್ಯಗಳು ಸಹವರ್ತಿಗಳಾಗಲು ಬದ್ಧವಾಗಿರುತ್ತವೆ. ಮತ್ತು ಅವುಗಳ ಆಯ್ಕೆಯಂತೆ ಇನ್ನಷ್ಟು ಅಧಿಕಾರವನ್ನು ಒಪ್ಪಂದದ ಮೇರೆಗೆ ಕೇಂದ್ರಕ್ಕೆ ವಹಿಸಿಕೊಡಬಹುದು. ಮಾನ್ಯರೆ, ಈ ಕಾರಣಗಳಿಗಾಗಿ, ಪ್ರಸ್ತುತ ಬದಲಾವಣೆಯಿಂದ ನನಗೆ ಖೇದವಿಲ್ಲ, ಈಗ ನಮ್ಮದು ಸಮಪ್ರಮಾಣದ ರಾಷ್ಟ್ರ. ನಮ್ಮ ಸರಹದ್ದುಗಳು ಗಾತ್ರದಲ್ಲಿ ಕುಗ್ಗಿರಬಹುದು– ಅದು ತಾತ್ಕಾಲಿಕ ಭಾವನೆ–ಮುಂದೆ ನಾವು ನೆಚ್ಚಿದ ಬಲಿಷ್ಠ ಸ್ವತಂತ್ರ ರಾಷ್ಟ್ರದ ಗುರಿ ತಲುಪುವತ್ತ ನಿಸ್ಸಂಕೋಚವಾಗಿ ಕ್ರಮಿಸುವ ಮುನ್ನೋಟ ಕಾಣಬಹುದು. ಆದುದರಿಂದ, ಈಗಾಗಲೇ ಸಲ್ಲಿಸಿದ ವರದಿಯ ಪರಿಷ್ಕರಣದ ಅಗತ್ಯ ಬಿತ್ತು.

ಗಮನಾರ್ಹ ಪ್ರಮಾಣದ ಕಾರ್ಯ ಈಗಾಗಲೇ ಪೂರ್ಣಗೊಂಡಿರುವುದನ್ನು ಸದಸ್ಯರು ಕಾಣಬಹುದು. ಸಂವಿಧಾನದ ಪ್ರಧಾನ ಸಂರಚನೆಯ ಬಗ್ಗೆ ಪ್ರಾಂತೀಯ ಸಂವಿಧಾನ ರಚನಾಸಮಿತಿಯ ವರದಿ ಈಗಾಗಲೇ ಸದನದಲ್ಲಿ ಸದಸ್ಯರ ಕೈಸೇರಿದೆ, ಅದನ್ನು ಇನ್ನೆರಡು ದಿನಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು. ಒಕ್ಕೂಟದ ಸಂವಿಧಾನ ರಚನಾ ಸಮಿತಿ ಆಗಲೆ ಶ್ವೇತ್ರಪತ್ರವೊಂದನ್ನು ಸಿದ್ಧಗೊಳಿಸಿದೆ. ಒಕ್ಕೂಟದ ಸಂವಿಧಾನದ ಸಂರಚನೆಯ ಬಗ್ಗೆ ಶ್ವೇತಪತ್ರ ಸಿದ್ಧವಾಗಿದ್ದು, ಈ ಅಧಿವೇಶನದಲ್ಲಿ ಸದನದ ಮುಂದೆ ಸಾದರಪಡಿಸಲಾಗುವುದು.

ಕಳೆದ ಅಧಿವೇಶನದಲ್ಲಿ ಒಕ್ಕೂಟದ ಅಧಿಕಾರ ಸಮಿತಿಯ ವರದಿಯನ್ನು ಮಂಡಿಸಿದ ಬಗ್ಗೆ ಸದನಕ್ಕೆ ನೆನಪು ಮಾಡಿಕೊಡುತ್ತಿದ್ದೇನೆ. ಅದರಲ್ಲಿ ಮೇ ೧೬ರ ಯೋಜನೆಯಲ್ಲಿ ನಮಗೆ ತಿಳಿಸಲಾದ ನಾಲ್ಕು ವರ್ಗಗಳ ಅಧಿಕಾರಗಳ ವಿವರವಿತ್ತು. ಬದಲಾವಣೆಯ ಪ್ರಯುಕ್ತ ಈ ಅಧಿಕಾರಗಳ ಪುನಃ ಪರೀಕ್ಷೆ ಅಗತ್ಯವಾಯಿತು. ಒಕ್ಕೂಟದ ಅಧಿಕಾರಗಳ ಸಮಿತಿಯ ಪೂರಕ ವರದಿಯೊಂದನ್ನು ಸಹ ಸದನದ ಪರಿಶೀಲನೆಗಾಗಿ ಮಂಡಿಸಲಾಗುವುದು. ಈ ನಿಯಮಗಳು ಸದನದಿಂದ ಅಂಗೀಕೃತವಾದ ನಂತರ ಅವುಗಳನ್ನು ಕರಡು ತಯಾರಿಕೆ ಸಮಿತಿಗೆ ಕಳುಹಿಸಿಕೊಡುವಂತೆ ಸಲಹೆ ಮಾಡಲಾಗಿದೆ. ಈ ಉದ್ದೇಶಕ್ಕಾಗಿ ರಚನೆಯಾದ ಸಮಿತಿ ಭಾರತ ಒಕ್ಕೂಟದ ಸಂವಿಧಾನಕ್ಕೆ ಅಗತ್ಯವಿರುವ ಮಸೂದೆಯೊಂದನ್ನು ಸಿದ್ಧಪಡಿಸುವ ಕೆಲಸದಲ್ಲಿ ತೊಡಗುತ್ತದೆ.

ಸದನಕ್ಕೆ ತಿಳಿದಿರುವಂತೆ ವರದಿಯ ೩ನೇ ಖಂಡಿಕೆಗೆ ಸಂಬಂಧಿಸಿದ ಕೆಲ ಹೊಸ ಮೂಲಭೂತ ಹಕ್ಕುಗಳ ಪ್ರಸ್ತಾವವನ್ನು, ಮರಳಿ ಸಲಹಾ ಸಮಿತಿಯ ಅವಗಾಹನೆಗೆ ಕಳುಹಿಸಿಕೊಡಲಾಗಿದೆ. ಅಲ್ಪಸಂಖ್ಯಾತರ

ಸಮಿತಿ ಇನ್ನೂ ಕೆಲವು ಅಂಶಗಳನ್ನು ಪರಿಶೀಲಿಸಬೇಕಿದೆ–ವಿಶೇಷವಾಗಿ ಅಲ್ಪಸಂಖ್ಯಾತರ ಬಗ್ಗೆ ಅಂಗೀಕರಿಸಬೇಕಾದ ನಿಯಮಗಳ ನಂತರ, ಬುಡಕಟ್ಟು ವಿಶೇಷ ಸಮಿತಿಗಳು ಕಾರ್ಯೋನ್ಮುಖವಾಗಿವೆ. ಅವುಗಳಲ್ಲಿ ಕೆಲವು ತಮ್ಮ ಕಾರ್ಯವನ್ನು ಪೂರೈಸಿಲ್ಲ. ಕೆಲವು ಸಮಿತಿಗಳು ತಮ್ಮ ಕೆಲಸವನ್ನು ಕೈಗೊಳ್ಳುವವೋ ಇಲ್ಲವೋ ನನಗೆ ತಿಳಿಯದು– ಎಲ್ಲ ವಿಷಯಗಳನ್ನು, ಸಲಹಾ ಸಮಿತಿ ಇನ್ನೂ ನಿರ್ಣಯಿಸಬೇಕಿದೆ. ಅವೆಲ್ಲವೂ ಸಲಹಾ ಸಮಿತಿಯ ಮುಂದೆ ಬರುತ್ತದೆ. ನಂತರ ವರದಿ ಕೈ ಸೇರುತ್ತದೆ.

ಸಲಹಾ ಸಮಿತಿಯು ತನ್ನ ಕಾರ್ಯವನ್ನು ಆಗಸ್ಟ್ ತಿಂಗಳಲ್ಲಿ ಪೂರ್ಣಗೊಳಿಸುವಂತೆ ೩ನೇ ಖಂಡಿಕೆ ಕೊನೆಯ ವಾಕ್ಯದಲ್ಲಿ ಸಲಹೆ ಮಾಡಲಾಗಿದೆ. ಶಿಫಾರಸ್ಸುಗಳು ನೇರವಾಗಿ ಕರಡು ತಯಾರಿಕೆ ಸಮಿತಿಗೆ ತಲುಪುತ್ತವೆ. ಸಮಿತಿಯು ಅಗತ್ಯ ಉಪಬಂಧಗಳ ಕರಡು ತಯಾರಿಸುತ್ತದೆ. ನಂತರ ಮಸೂದೆಯ ಕೆಲ ಉಪಬಂಧಗಳ ರೂಪದಲ್ಲಿ ಅದು ನಂತರದ ಅಧಿವೇಶನದಲ್ಲಿ ಸದನದ ಮುಂದೆ ಬರುತ್ತದೆ. ಆದರೆ ನನ್ನ ಈ ನಿಲುವಳಿಗೆ ಶ್ರೀ ಸಂತಾನಂ ಅವರು ಒಂದು ತಿದ್ದುಪಡಿಯನ್ನು ಪ್ರಸ್ತಾವಿಸಿದ್ದಾರೆ. ಅದು ಸದನದ ಅನೇಕ ಸದಸ್ಯರ ಬೆಂಬಲ ಪಡೆದಿದೆ. ನನಗೆ ತಿಳಿದಿರುವಂತೆ ಸದನದ ಬಹುತೇಕ ಸದಸ್ಯರು ಒಂದು ಅಭಿಪ್ರಾಯವನ್ನು ತಳೆದಿದ್ದಾರೆ. ಅದೆಂದರೆ ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ನಿಯಮಗಳನ್ನು ಅಂಗೀಕರಿಸುವಾಗ, ಅವುಗಳನ್ನು ನೇರವಾಗಿ ಕರಡು ತಯಾರಿಕೆ ಸಮಿತಿಗೆ ಕಳುಹಿಸಬಾರದು; ಅವುಗಳನ್ನು ಸದನದ ಈ ಅಧಿವೇಶನದಲ್ಲಿ ಮಂಡಿಸಬೇಕೆಂಬುದು. ಇಲ್ಲಿ ನಿರ್ಧರಿಸಲ್ಪಟ್ಟ ನಂತರ, ಅವುಗಳಿಗೆ ಉಪಬಂಧಗಳ ರೂಪತರಲು ಕರಡು ತಯಾರಿಕೆ ಸಮಿತಿಗೆ ಕಳುಹಿಸಿಕೊಡಬೇಕು. ಅದುವೆ ಸದನದ ಅಭಿಪ್ರಾಯವಾದರೆ ಶ್ರೀ ಸಂತಾನಂ ಅವರ ಪ್ರಸ್ತಾವ ಅಂಗೀಕೃತವಾಗುತ್ತದೆ. ೩ನೇ ಖಂಡಿಕೆಯ ಕೊನೆಯ ವಾಕ್ಯಕ್ಕೆ ಪುಷ್ಟಿ ಕೊಡುತ್ತದೆ.

ಈ ವರುಷದ ಅಕ್ಟೋಬರ್ ಮಾಹೆಯೊಳಗೆ, ಸಭೆಯು ತನ್ನ ಕಾರ್ಯಕಲಾಪಗಳನ್ನು ಪೂರ್ಣಗೊಳಿಸಬೇಕೆಂದು, ೪ನೇ ಖಂಡಿಕೆಯಲ್ಲಿ ಸಲಹೆ ಮಾಡಲಾಗಿದೆ. ಮಾನ್ಯರೆ, ತಾವು ಸೂಚಿಸಿದಂತೆ, ಸಂವಿಧಾನದ ಕಾರ್ಯ ಆದಷ್ಟೂ ಬೇಗನೆ ಪೂರ್ಣಗೊಳ್ಳುವುದು ಅತ್ಯಗತ್ಯ. ಸಾಧ್ಯವಾದರೆ ನವೆಂಬರ್ ಮಾಹೆಯೊಳಗೆ, ಸಂವಿಧಾನ ರೂಪುಗೊಂಡಿರಬೇಕು, ನಾವು ಇನ್ನಷ್ಟು ಕಾಲ, ತೆಗೆದುಕೊಳ್ಳಬಹುದೆಂಬ ಆಲೋಚನೆಯ ಮೇರೆಗೆ, ಹಿಂದೆ ನಿಯಮಗಳು ರಚಿಸಲ್ಪಟ್ಟವು. ಅವು ವರ್ಗಗಳು, ಸಮೂಹಗಳು ಮತ್ತು ಇತರ ವಿವಿಧ ಅಂಶಗಳನ್ನೊಳಗೊಂಡಿದ್ದುವು. ಹಳೆಯ ೬೩ನೇ ನಿಯಮ ರೂಪುಗೊಂಡಾಗ, ಸಂವಿಧಾನದ ಸಾಮಾನ್ಯ ಅಂಶಗಳು ಸದನದ ಅನುಮೋದನೆ ಪಡೆದಾಗ ಅದನ್ನು ಶಾಸನಸಭೆಯ ಸದಸ್ಯರಲ್ಲಿ ವಿತರಿಸಬೇಕೆಂದು ಉದ್ದೇಶಿಸಲಾಗಿತ್ತು. ಅಂತಹ ಸುದೀರ್ಘ ಪ್ರಕ್ರಿಯೆಯಲ್ಲಿ ತೊಡಗುವ ಅಗತ್ಯವಿಲ್ಲ. ಏಕೆಂದರೆ ಮೊದಲಿಗೆ ಈಗಾಗಲೇ ಸಂವಿಧಾನ ರಚನಾಸಭೆ ಪ್ರಶ್ನಾವಳಿಯನ್ನೂ ಹಂಚಿದ್ದು ಅವುಗಳಿಗೆ ಈ ರಾಷ್ಟ್ರದ ಹಲವಾರು ಶಾಸನಸಭೆಗಳ ಸದಸ್ಯರು ಉತ್ತರಿಸಿದ್ದಾರೆ. ಸಮಿತಿಯ ಮುಂದೆ ಅವೆಲ್ಲ ಅಭಿಪ್ರಾಯಗಳನ್ನು ಕಲೆಹಾಕಲಾಗಿದೆ. ಎರಡನೆಯದಾಗಿ, ಹಿಂದೆ ನಾವು ಉದ್ದೇಶಿಸಿದ ವಿಳಂಬಗತಿಯಲ್ಲಿ ಕ್ರಮಿಸಲಾಗದಷ್ಟು ತ್ವರಿತಗತವಾಗಿ ವಿದ್ಯಮಾನಗಳು ಸಂಭವಿಸುತ್ತಿವೆ. ಆಗಸ್ಟ್ ೧೫ರಂದು ಭಾರತ ಮುಕ್ತ ಸ್ವತಂತ್ರ ಆಧಿಪತ್ಯವಾಗುವುದು. ಆ ಹಂತವನ್ನು ಆದಷ್ಟೂ ಬೇಗನೆ ನಾವು ತಲುಪಬೇಕು, ನಮಗೆ ನಮ್ಮದೇ ಸಂವಿಧಾನ ಆ ವೇಳೆಗೆ ಲಭ್ಯವಾಗಬೇಕು. ಅದು ನಮಗೆ ಅಗತ್ಯವಿರುವ ಬಲವನ್ನು ಕೊಡುತ್ತದೆ. ಅಧಿಪತ್ಯದ ಸಂವಿಧಾನ ಆಗಸ್ಟ್ ೧೫ನೇ ದಿನಾಂಕ ಅಸ್ತಿತ್ವಕ್ಕೆ ಬಂದಾಗ ರಾಜ್ಯ ಪ್ರತಿನಿಧಿಗಳಿಗೆ ಸ್ಥಾನವಿರದೆಂಬುದನ್ನು ಮರೆಯಬಾರದು. ಆದುದರಿಂದ, ಆದಷ್ಟು ಬೇಗನೆ ಒಕ್ಕೂಟದ ಸಂವಿಧಾನ ಅಸ್ತಿತ್ವಕ್ಕೆ ಬರಲೆಂಬುದು ನಮ್ಮ ಇಚ್ಛೆ, ಅದು ಹಾಗಾಗಬೇಕಿದ್ದರೆ, ನಿರ್ಧಾರವನ್ನು ಸದನದ ಸದಸ್ಯರ ಗಮನಕ್ಕೆ ತರುವ ನೀಳ್‌ಪ್ರಕ್ರಿಯೆ ಅನಗತ್ಯವಾದುದರಿಂದ ಅದನ್ನು ಬಿಡಬೇಕು. ಈ ಸದನವು ಎಲ್ಲ ಹಿತಾಸಕ್ತಿಗಳು ಪ್ರಾತಿನಿತ್ಯ ಹೊಂದಿರುವುದರಿಂದ ಪ್ರತಿನಿಧಿ ವ್ಯವಹಾರಗಳನ್ನು ಎಳೆಯುತ್ತ ಹೋಗುವುದಕ್ಕೆ ಕಾರಣವೇ ಇಲ್ಲ. ಜೊತೆಗೆ ಈ ಸದನವು ಭಾರಿ ಒತ್ತಡಕ್ಕೆ

ಮಣಿದು ಕಾರ್ಯ ಪೂರ್ಣಗೊಳಿಸುತ್ತಿದೆ. ಕಾಲಾವಕಾಶವೂ ಸೀಮಿತ. ಆ ಉದ್ದೇಶಕ್ಕಾಗಿ ಒಕ್ಕೂಟದ ಸಂವಿಧಾನದ ವರದಿಯಲ್ಲಿ ಒಂದು ಅವಕಾಶವನ್ನು ಕಲ್ಪಿಸಿರುವುದನ್ನು ಸದನವು ಗಮನಿಸಬಹುದು. ಅದರಂತೆ ಸಂವಿಧಾನ ಅಸ್ತಿತ್ವಕ್ಕೆ ಬಂದ ಮೂರು ವರುಷಗಳ ಒಳಗೆ ತಿದ್ದುಪಡಿಯನ್ನು ಸುಲಭವಾಗಿ ತರಬಹುದು. ನಾವು ಭಾರಿ ಒತ್ತಡದ ನಡುವೆ ಸಂವಿಧಾನವನ್ನು ರೂಪಿಸುತ್ತಿದ್ದೇವೆ. ಹಾಗಾಗಿ ಕೆಲವು ಲೋಪದೋಷಗಳಿರುವ ಸಾಧ್ಯತೆ ಇದೆ. ಆದುದರಿಂದ ಮೊದಲ ಮೂರು ವರುಷಗಳಲ್ಲಿ, ಕಠಿಣವಾದ ಅತಿವಿಸ್ತೃತ ಯೋಜನೆಯೊಂದರ ಮೂಲಕ ತಿದ್ದುಪಡಿಗಳನ್ನು ತರುವ ಅಗತ್ಯವಿಲ್ಲ. ವರದಿಯ ಮೂಲಕ ಸದನದ ಗಮನಕ್ಕೆ ತರಬೇಕೆಂದಿರುವ ಅಂಶವಿಷ್ಟೆ. ಒಂದೆಡೆ ಸಲಹಾ ಸಮಿತಿ ಮುಂದುವರೆದು ತನ್ನ ಕಾರ್ಯವನ್ನು ಪೂರೈಸುವುದು. ಇನ್ನೊಂದೆಡೆ ಕರಡು ಸಮಿತಿ ಸಂವಿಧಾನ ಮಸೂದೆಯನ್ನು ರೂಪಿಸುವುದು. ಮತ್ತು ಮುಂದಿನ ಅಕ್ಟೋಬರ್ ಮಾಹೆಯ ಮಧ್ಯ ಭಾಗದಲ್ಲಿ, ಸದನದ ಮುಂದೆ ಮಂಡಿಸಲು ಅನುಮೋದನೆ ಪಡೆಯಲು ಮಸೂದೆ ಸಿದ್ಧವಿರುತ್ತದೆ. ಈ ಸಂವಿಧಾನ ಆದಷ್ಟೂ ಬೇಗನೆ ರೂಪುಗೊಳ್ಳುವುದು ತೀರಾ ಅಗತ್ಯ.

ಇನ್ನೊಂದು ವಿಷಯ. ಇಂದು ನಮ್ಮೊಡನೆ ಮುಸ್ಲಿಮ್ ಲೀಗ್ ಪ್ರತಿನಿಧಿಗಳಿದ್ದಾರೆ. ಅವರಲ್ಲಿ ಕಾನೂನಿಗೆ ಬದ್ಧರಾದ ಭಾರತದ ನಿಷ್ಠಾವಂತ ಪ್ರಜೆಗಳಾಗಿದ್ದಾರೆ ಎಂಬುದರಲ್ಲಿ ನನಗೆ ಸಂಶಯವಿಲ್ಲ. ಸಂವಿಧಾನವನ್ನು ಸಂಪೂರ್ಣವಾಗಿ ಅಷ್ಟೇ ತ್ವರಿತವಾಗಿ ರಚಿಸಿ ಮುಗಿಸುವಲ್ಲಿ ಅವರು ನಮಗೆ ಸಹಕಾರ ನೀಡುತ್ತಾರೆ. ಮತ್ತು ಅಲ್ಪಸಂಖ್ಯಾತರಾಗಿ ತಮಗೆ ಸಲ್ಲಬೇಕಾದ ಗೌರವಯುತ ಸ್ಥಾನವನ್ನು ಅವರು ಪಡೆಯುತ್ತಾರೆ. ಎರಡನೆಯದಾಗಿ, ಇಲ್ಲಿಗೆ ಆಗಮಿಸಿರುವ ರಾಜ್ಯದ ಪ್ರತಿನಿಧಿಗಳಲ್ಲಿ ನನ್ನದೊಂದು ಕೋರಿಕೆ. ಕಾಲಾವಕಾಶ ಅತಿ ಕಡಿಮೆ. ಒಕ್ಕೂಟದ ರಚನೆ ಅಕ್ಟೋಬರ್ ತಿಂಗಳ ಕೊನೆಯೊಳಗೆ ಅಥವಾ ನವೆಂಬರ್ ಆಖೈರಿಯೊಳಗೆ ಪೂರ್ಣಗೊಳ್ಳಬೇಕೆಂಬುದು ವರದಿಯ ಉದ್ದೇಶ. ಸಹಜವಾಗಿಯೇ ಸದಸ್ಯರ ಸಹಕಾರವನ್ನು ಸದನವು ನಿರೀಕ್ಷಿಸುತ್ತದೆ. ಸಂವಿಧಾನ ರಚನೆಯ ಈ ತುರ್ತುಕೆಲಸದಲ್ಲಿ ರಾಜ್ಯಗಳ ಪ್ರತಿನಿಧಿಗಳ ಸಹಕಾರ ಅತ್ಯಗತ್ಯ.

ಒಕ್ಕೂಟದ ಹಂದರದೊಳಗೆ ರಾಜ್ಯಗಳು ಕೂಡುವ ವಿಧಾನಗಳ ಬಗ್ಗೆ ಪ್ರಸ್ತಾಪಿಸುವುದಾದರೆ, ಪ್ರಾರಂಭದಲ್ಲಿ ಅವರಿಗಿದ್ದ ಸಂಶಯವೆಲ್ಲವೂ ಸಭೆಯ ಕಾರ್ಯವೈಖರಿಯಿಂದ ನಿವಾರಣೆಯಾಗಿದೆ ಎಂದು ನಾನು ದೃಢವಾಗಿ ನಂಬುತ್ತೇನೆ. ಕೆಲ ದಿನಗಳ ಹಿಂದೆ ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ನೀಡಿದ ಹೇಳಿಕೆಯಿಂದ ರಾಜ್ಯಗಳ ಪ್ರತಿನಿಧಿಗಳಿಗೆ ಸಂಪೂರ್ಣ ಭರವಸೆ ದೊರೆತಿದೆ.

ಸಂವಿಧಾನ ರಚನಾಸಭೆಯ ಸದಸ್ಯರ ಮಟ್ಟಿಗೆ ಹೇಳುವುದಾದರೆ, ಅವರೆಲ್ಲರಿಗೂ ರಾಜ್ಯಗಳು ಒಕ್ಕೂಟದೊಳಗೆ ಸೇರುವುದು ಇಷ್ಟವಾಗುತ್ತದೆ. ಮೇ ೧೬ರ ಯೋಜನೆಯ ಆಧಾರದ ಮೇಲೆ ರಾಜ್ಯದ ಪ್ರತಿನಿಧಿಗಳು ಸಮಪ್ರಮಾಣದಲ್ಲಿ ಮಿಕ್ಕವರಂತೆಯೇ ಸಂತೃಪ್ತಿ, ಸಂತಸ ಪಡೆಯುವರೆಂಬ ವಿಶ್ವಾಸ ನನಗಿದೆ.

ನಾನೊಂದು ಮಾತು ಹೇಳಬಯಸುತ್ತೇನೆ. ಇಲ್ಲಿ ಕಾಲ ನಮ್ಮೆಲ್ಲರ ಚಟುವಟಿಕೆಗಳ ಕೇಂದ್ರ ಬಿಂದು, ಬಲಿಷ್ಠ ಭಾರತದ ಸಂವಿಧಾನವನ್ನು ರಚಿಸುವ ದೃಢ ನಿರ್ಧಾರವನ್ನು ಹೊತ್ತು ಈ ಜಗತ್ತನ್ನು ಎದುರಿಸಿ ನಿಂತಿದ್ದೇವೆ. ಭಾರತದ ಮಹಾನ್ ದೇಶವಾಗಲಿದೆ, ಶಕ್ತಿಯುತ ರಾಷ್ಟ್ರವಾಗಲಿದೆ, ದುರದೃಷ್ಟವಶಾತ್ ಜಗತ್ತು ಮತ್ತೊಂದು ಗಂಡಾಂತರದತ್ತ ಧಾವಿಸುತ್ತಿದೆ. ಅದು ಬಾರದಿರಲಿ. ಒಂದು ವೇಳೆ ಅದು ಬಂದದ್ದಾದರೆ, ನಾವು ಎದುರಿಸಲು ಸಿದ್ಧರಿಲ್ಲವೆಂದು ಕೈಚೆಲ್ಲಿ ಕೂರಲಾಗದು.

ಇಷ್ಟನ್ನು ಹೇಳಿ ಸದನದ ಪರ್ಯಾಲೋಚನೆಗಾಗಿ ನಾನು ಈ ವರದಿಯನ್ನು ಮಂಡಿಸುತ್ತಿದ್ದೇವೆ.

ಶ್ರೀ ಸಂತಾನಂ ಅವರು ಪ್ರಸ್ತಾಪಿಸಲಿರುವ ತಿದ್ದುಪಡಿಗೆ ನನ್ನ ಆಕ್ಷೇಪವಿಲ್ಲ.

**ಶ್ರೀ ಕೆ. ಸಂತಾನಮ್** (ಮದ್ರಾಸು : ಸಾಮಾನ್ಯ) : ಮಾನ್ಯರೇ ತಮ್ಮ ಅನುಮತಿಯನ್ನು ಪಡೆದು ತಿದ್ದುಪಡಿಯನ್ನು ಪ್ರಸ್ತಾಪಿಸುತ್ತಿದ್ದೇನೆ.

"ಪ್ರಸ್ತಾವದ ಕೊನೆಯಲ್ಲಿ ಕೆಳಕಂಡಂತೆ ಸೇರಿಸಿ:

ಮುಂದುವರೆದು ೩ನೇ ಖಂಡಿಕೆಯನ್ನು ಹೊರತುಪಡಿಸಿ ವರದಿಯನ್ನು ಅಂಗೀಕರಿಸಬೇಕು. ಮೂಲಭೂತ ಹಕ್ಕುಗಳು– ಅಲ್ಪಸಂಖ್ಯಾತರು, ಬುಡಕಟ್ಟು ಮತ್ತು ಹೊರಗುಳಿದ ಪ್ರದೇಶಗಳ ಸಲಹಾ ಸಮಿತಿಗೆ, ಅಲ್ಪಸಂಖ್ಯಾತರಿಗೆ ಸಂಬಂಧಿಸದಂತೆ ಅಂಗೀಕಾರವಾಗುವ ಸಾಮಾನ್ಯ ನಿಯಮಗಳನ್ನು ಸದನದ ಪರಿಶೀಲನೆಗಾಗಿ ಕೆಲ ದಿನಗಳು ಮುಂಚಿತವಾಗಿ, ಸಾಧ್ಯವಾದರೆ ಈ ಅಧಿವೇಶನ ಕೊನೆಗೊಳ್ಳುವ ಮುನ್ನ ರೂಪಿಸುವಂತೆ ಸೂಚಿಸುವುದು. ಸಂವಿಧಾನದ ಕರಡಿನಲ್ಲಿ ನಿಗಮಿತಗೊಳ್ಳುವ ಮುನ್ನ ನಿಯಮಗಳನ್ನು ಸದನವು ಅನುಮೋದಿಸುವುದು. ನಂತರ ೩ನೇ ಕಂಡಿಕೆಯಲ್ಲಿ ಪ್ರಸ್ತಾಪಿಸಿದ ಪ್ರಕ್ರಿಯೆಯನ್ನು ಅನುಸರಿಸಿ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಗಿದೆ.''

ಈ ತಿದ್ದುಪಡಿಯ ಅಗತ್ಯ ಕುರಿತು ನಾನು ಹೆಚ್ಚೇನು ಹೇಳಬೇಕಿಲ್ಲ. ಅಲ್ಪಸಂಖ್ಯಾತರ ಹಕ್ಕುಗಳನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅನುಸರಿಸಬೇಕಾದ ನಿಯಮಗಳ ರಚನೆಗಾಗಿ ನಾವೆಷ್ಟು ಬೌದ್ಧಿಕ ಶ್ರಮವನ್ನು ವಿನಿಯೋಗಿಸಿದ್ದೇವೆಂಬುದು ನಮ್ಮೆಲ್ಲರಿಗೂ ಗೊತ್ತು. ಅವು ಸಂವಿಧಾನದಲ್ಲಿ ನಿಗದಿತಗೊಂಡಾಗ ಬದಲಾಯಿಸಲು ಸಾಧ್ಯವಾಗದ ಗೊಂದಲಕ್ಕೆ ಸಿಕ್ಕಿಬೀಳುತ್ತೇವೆ. ಯಾವುದೇ ಪ್ರಮುಖ ಬದಲಾವಣೆ ತರಲು ಹೊರಟಾಗಲೂ ಅದು ಭಾರಿ ತವಕ, ತಲ್ಲಣ ತರುತ್ತದೆ; ಕರಡು ಪ್ರಕಟಗೊಂಡು ವಿತರಣೆಯಾಗಿ, ವಿವಿಧ ವೇದಿಕೆಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಟೀಕೆ ಟಿಪ್ಪಣಿಗೆ ಗುರಿಯಾದಾಗ ಪರಿಣಾಮ ಇನ್ನೂ ಯಾತನಾಮಯ. ಆದುದರಿಂದ, ಸಂವಿಧಾನದ ಇತರ ಮೂಲತತ್ತ್ವಗಳಂತೆ ಮತದಾನ ಮತ್ತಿತರ ತತ್ಸಂಬಂಧಿತ ವಿಷಯಗಳಿಗೆ ಅನ್ವಯವಾಗುವ ನಿಯಮಗಳನ್ನು ಮೊದಲು ಅನುಮೋದಿಸಿ ನಂತರ ಕರಡಿನಲ್ಲಿ ನಿಗಮಿತಗೊಳಿಸಬೇಕು.

**ಮಾನ್ಯ ಅಧ್ಯಕ್ಷರು :** ಯಾರಾದರೂ ಸದಸ್ಯರು ಸದನದಲ್ಲಿ ಈ ಬಗ್ಗೆ ಮಾತನಾಡಲು ಇಚ್ಛಿಸುತ್ತಾರಾ?

**ಶ್ರೀ ನಜೀರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಲ : ಮುಸ್ಲಿಮ್) : ಸನ್ಮಾನ್ಯ ಅಧ್ಯಕ್ಷರೆ, ನಾನು ಸದನಕ್ಕೆ ಹೊಸಬ. ವ್ಯವಹಾರ ಸಮಿತಿಯ ಆದೇಶದ ಮುಂದುವರಿದ ವರದಿಯ ಪರಿಶೀಲನೆಗಾಗಿ, ಕೆ ಎಂ. ಮುನ್ಷಿಯವರು ಪ್ರಸ್ತಾವವನ್ನು ಮಂಡಿಸಿರುವುದಾಗಿ ತಿಳಿದು ಬರುತ್ತದೆ. ಇದರ ಅರ್ಥ ಈ ಹಿಂದೆ ಒಂದು ವರದಿ ಇತ್ತು. ನಮಗೆ ಅದರ ಪ್ರತಿ ದೊರೆತಿಲ್ಲ. ಇದು ನಮ್ಮನ್ನು ತೊಂದರೆಗೆ ಸಿಲುಕಿಸುತ್ತದೆ. ಈಗಾಗಲೆ ಏನು ನಡೆಯಿತೆಂಬುದನ್ನು ನಾವು ತಿಳಿಯುವುದು ಅಗತ್ಯ.

ಎರಡನೆಯದಾಗಿ, ಮೇ ೧೬ರ ಹೇಳಿಕೆಯ ಅಧಿಕೃತ ಪ್ರತಿ ನಮಗೆ ದೊರೆಯಬೇಕು. ಅಂತೆಯೇ ಜೂನ್ ೩ರ ಹೇಳಿಕೆಯ ಪ್ರತಿಯೂ ಬೇಕು. ಎಲ್ಲರೂ ಅದನ್ನು ಓದಿರಬಹುದಾದರೂ, ನಮಗೆ ಅದರ ಅಧಿಕೃತ ಪ್ರತಿಗಳು ತಲುಪಬೇಕು. ಆಗಷ್ಟೆ ನಾವು ಕ್ರಮಬದ್ಧವಾಗಿ ಮುಂದೆ ಸಾಗಲು ಅನುಕೂಲ.

ಮುಸ್ಲಿಮ್ ಲೀಗ್‌ನ ಸದಸ್ಯರು ನಿಷ್ಠಾವಂತರೂ ಭಾರತದ ಕಾನೂನು ಪಾಲಕ ಪ್ರಜೆಗಳು ಆಗಿರಬೇಕೆಂದು, ಪ್ರಸ್ತಾವದ ಪ್ರಸ್ತಾವಕರು ಕೋರಿದ್ದಾರೆ. ನಿಷ್ಠಾವಂತರಾಗಿ, ಭಾರತದ ಕಾನೂನು ಪಾಲಕ ಪ್ರಜೆಗಳಾಗಿ, ನಾವಿಲ್ಲಿ ಬಂದಿರುವುದರಿಂದಲೆ ಆ ಬಗ್ಗೆ ಸಂಶಯಕ್ಕೆ ಎಡೆಯಿಲ್ಲವೆಂಬುದನ್ನು ತಿಳಿದಿರಬೇಕಿತ್ತು. (ಚಪ್ಪಾಳೆ). ಆದಷ್ಟು ತ್ವರಿತವಾಗಿ, ಯುಕ್ತವಾಗಿ ಸಂವಿಧಾನ ರಚನೆಯ ವ್ಯವಹಾರದಲ್ಲಿ ಭಾಗವಹಿಸಲು ನಾವಿಲ್ಲಿಗೆ ಬಂದಿದ್ದೇವೆಂದು ನಮ್ರತೆಯಿಂದ ತಿಳಿಸಲು ಬಯಸುತ್ತೇನೆ. ನಾವು ಹೊಸಬರು. ಹಳೆಯ ವರದಿಯನ್ನು ಅಧ್ಯಯನಮಾಡಲು ಕೆಲಕಾಲ ಹಿಡಿಸುತ್ತೆ. ಚರ್ಚೆಗಳು ಮತ್ತಿತರ ಪ್ರಮುಖ ದಾಖಲೆಗಳ ವಿವರಗಳನ್ನು ತಿಳಿದುಕೊಂಡ ನಂತರ ಸದನದ ಕಾರ್ಯಕಲಾಪಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುವುದು ಉಚಿತ.

**ಶ್ರೀ ಆರ್. ವಿ. ಧುಲೇಕರ್ :** (ಸಂ.ಪ್ರಾಂ. : ಸಾಮಾನ್ಯ) : *[ಕೆ. ಎಂ. ಮುನ್ಷಿಯವರು ಸಲ್ಲಿಸಿರುವ ವರದಿಯ ಬಗ್ಗೆ ನನ್ನ ಸಹಮತವಿದೆ. ಇದುವರೆಗೆ ಸಂವಿಧಾನ ರಚನಾಸಭೆ, ಏನೇನು ಕಾರ್ಯಗಳನ್ನು ಮಾಡಬೇಕಿತ್ತೆಂಬುದರ ಬಗ್ಗೆ ಅವಕಾಶದ ಮಾತುಗಳನ್ನು ಒಪ್ಪುತ್ತೇನೆ. ಸದನದ ಮುಂದೆ ಕೆಲ ವಿಷಯಗಳು ಪ್ರಸ್ತಾವಕ್ಕೆ ಬರಲಿವೆ. ಅವುಗಳ ಬಗ್ಗೆ ನಾನು ಮಾತನಾಡಲು ಇಚ್ಛಿಸುತ್ತೇನೆ. ಮೊದಲಿಗೆ, ಇತ್ತೀಚಿನ ಕೆಲ

ಬದಲಾವಣೆಗಳಿಂದ, ಕೆಲವರು ಸಂವಿಧಾನ ರಚನಾಸಭೆಯ ಸದಸ್ಯರಾಗಿ ಉಳಿದಿಲ್ಲ. ಅವರ ಸ್ಥಾನಕ್ಕೆ ಹೊಸಬರು ಚುನಾಯಿತರಾಗಿದ್ದಾರೆ, ಹೊಸಬರಿಗೆ, ನಾವಿದುವರೆಗೆ ಮಾಡಿದ ಕಾರ್ಯಗಳೆಲ್ಲವನ್ನೂ ತಿಳಿಯಲು ಕಾಲಾವಕಾಶ ಬೇಕು. ಆದುದರಿಂದ ಕಳೆದ ೬ ತಿಂಗಳು ನಮ್ಮ ಕಾರ್ಯಾಚರಣೆಯ ಪುನರೀಕ್ಷಣೆ ಅಗತ್ಯ. ಇದಾಗದಿದ್ದಲ್ಲಿ ನಾವು ಮುಂದುವರೆಯುವುದು ಕಷ್ಟ. ನಾವು ಅದರ ಬಗ್ಗೆ ಆಲೋಚಿಸಬೇಕು. ಭಾರತ ಈಗ ಇಬ್ಭಾಗವಾಗಿದೆ. ಆದುದರಿಂದ, ಸಂವಿಧಾನ ರಚನಾಸಭೆ ಅಸ್ತಿತ್ವಕ್ಕೆ ಬಂದಾಗ ತಾಳಿದ ನಿಲುವಿಗೆ ಬದ್ಧವಾಗಬೇಕೆ ಅಥವಾ ಈಗ ಬದಲಾಯಿಸಬೇಕೆ ಎಂಬುದನ್ನು ಯೋಚಿಸಬೇಕು. ಅದರ ಪರಿಶೀಲನೆಯ ಅಗತ್ಯ ನಮಗಿದೆ. ಏಕೆಂದರೆ, ಒಂದು ಕಾಲಘಟ್ಟದಲ್ಲಿ ಸೂಕ್ತವೆನಿಸಿದ್ದು, ಮತ್ತೊಮ್ಮೆ ಅನುಚಿತವಾಗುತ್ತದೆ. ಕಳೆದ ಕೆಲ ತಿಂಗಳುಗಳ ವ್ಯವಹಾರದಲ್ಲಿ ನಾವು ಗಮನಿಸಬೇಕಾದುದೆಂದರೆ, ನಮ್ಮ ಧ್ಯೇಯೋದ್ದೇಶದ ನಿಲುವಳಿ ಅಂಗೀಕೃತವಾಗಿ, ಅದರಂತೆ ನಾವು ಕೆಲ ಆಶ್ವಾಸನೆಗಳನ್ನು ನೀಡಿದ್ದೆವು. ಭಾರತ ನಿವಾಸಿಗಳಿಗೆ ಎಲ್ಲ ರೀತಿಯಲ್ಲೂ ನಿರಂತರ ರಕ್ಷಣೆ ಒದಗಿಸುತ್ತೇವೆಂಬ ಭರವಸೆ ನೀಡಿದ್ದೆವು. ಅವರ ಸಂಸ್ಕೃತಿ, ಭಾಷೆ ಮತ್ತು ನಾಗರಿಕತೆಯ ಪರಿಪೂರ್ಣ ರಕ್ಷಣೆ ನೀಡುವುದಾಗಿ ಮಾತು ಕೊಟ್ಟಿದ್ದೆವು. ಅವೆಲ್ಲ ಅಂಗೀಕೃತವಾದ ದಿನ, ಆ ಆಶ್ವಾಸನೆಗಳು ಇಂದಿಗೂ ಔಚಿತ್ಯಪೂರ್ಣವಾಗಿವೆಯೇ ಎಂಬುದನ್ನು ಪರಿಶೀಲಿಸಬೇಕು. ನನ್ನ ಅಭಿಪ್ರಾಯದಂತೆ, ಪ್ರಸ್ತುತ ನಮ್ಮ ದೃಷ್ಟಿಕೊನ ಬದಲಾಗಬೇಕು. ಆ ನಿಲುವಳಿಯ ಸಂಬಂಧ ನಡೆದ ಚರ್ಚೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಬದಲಾಗಬೇಕು. ಆ ಹೊತ್ತಿಗೆ ಹಿಂದುಸ್ತಾನಿ ಭಾಷೆಯನ್ನು, ಈ ಸಂವಿಧಾನ ರಚನಾಸಭೆ ತನ್ನ ಭಾಷೆಯನ್ನಾಗಿ ಅಂಗೀಕರಿಸಬೇಕೆಂಬ ಅಂಶವನ್ನು ನಾನು ಪ್ರಸ್ತಾಪಿಸಿದ್ದೆ. ಈಗ ನಮ್ಮ ಭಾಷೆ ಮತ್ತು ಆಸ್ತಿಗೆ ಸಂಬಂಧಿಸಿದ ಪ್ರಶ್ನೆಯನ್ನು ಪುನರ್‌ವಿಮರ್ಶೆ ಮಾಡಬೇಕು. ಎರಡನೆಯದಾಗಿ, ನಾವು ಅಕ್ಟೋಬರ್ ಅಥವಾ ನವೆಂಬರ್ ತಿಂಗಳನ್ನು ನಿಗದಿಪಡಿಸಿ ವರದಿಯಲ್ಲಿ ದಾಖಲಿಸಿದ್ದೇವೆ. ಈ ಸಂವಿಧಾನ ರಚನಾಸಭೆ, ಕೇಂದ್ರಸಭೆಯಾಗಿ ಪರಿವರ್ತಿತಗೊಳ್ಳುವುದೆಂದು ಹೇಳಲಾಗಿದೆ. ಪ್ರಾಂತೀಯ ಶಾಸನಸಭೆಯಿಂದ ಚುನಾಯಿತರಾಗಿ, ಸಂವಿಧಾನ ರಚನಾಸಭೆಗೆ ಬಂದಿರುವ ಸದಸ್ಯರ ಸ್ಥಾನವೇನೆಂಬುದನ್ನು ಪರಿಶೀಲಿಸಬೇಕು. ಅವರನ್ನು ಮರಳಿ ರಾಜ್ಯ ಶಾಸನಸಭೆಗೆ ಹೋಗುವಂತೆ ಕೋರಲಾಗುವುದೆಂದು ಕೆಲವರು ಹೇಳುತ್ತಾರೆ.]

**ಮಾನ್ಯ ಅಧ್ಯಕ್ಷರು :** *[ಶ್ರೀ ಧುಲೇಕರ್, ನೀವು ಪ್ರಮುಖ ವಿಷಯದಿಂದ ಬಹಳಷ್ಟೆ ಪಲ್ಲಟಗೊಂಡಿದ್ದೀರೆನಿಸುತ್ತೆ.]*

**ಶ್ರೀ ಆರ್. ವಿ. ಧುಲೇಕರ್** *[ಇಲ್ಲ ಸರ್, ನಾನು ಪಲ್ಲಟಗೊಂಡಿಲ್ಲ]*

**ಸನ್ಮಾನ್ಯ ಅಧ್ಯಕ್ಷರು :** *[ನನ್ನ ಕರ್ತವ್ಯದಲ್ಲಿ ಇದುವರೆಗೆ ತೊಡಗಿರುವೆನೆಂದು ಭಾವಿಸಿದ್ದೆ. ಆದರೆ ನೀವು ವಿಷಯಾಂತರಕ್ಕೆ ಎಡೆಕೊಟ್ಟಿದ್ದೀರಿ ಎಂದೆನಿಸುತ್ತೆ. ಈ ವರದಿಯಲ್ಲಿರುವ ಕಾರ್ಯಕ್ರಮವನ್ನೂ ವೇಳಾಪಟ್ಟಿಯನ್ನೂ ಅಂಗೀಕರಿಸಬೇಕೆ ಎಂಬುದು ಪ್ರಶ್ನೆ. ನೀವು ಬಹಳಷ್ಟು ಪ್ರಶ್ನೆಗಳನ್ನು ಎತ್ತಿದ್ದೀರಿ, ಸಂವಿಧಾನಿಕ ವಿಷಯಗಳನ್ನು ವಿವಾದಗಳನ್ನು ಪ್ರಸ್ತುತ ಪ್ರಸ್ತಾಪಿಸುವುದಕ್ಕೆ ಇದು ಕಾಲವಲ್ಲ.]*

**ಶ್ರೀ ಆರ್.ವಿ. ಧುಲೇಕರ್ :** *[ಮಾನ್ಯರೆ, ಕ್ಷಮಿಸಿ, ಶ್ರೀ ಕೆ.ಎಂ. ಮುನ್ಷಿಯವರು ಸೂಚಿಸಿರುವ ಕಾರ್ಯಕ್ರಮದಂತೆ, ಹೊರ ಚುನಾವಣೆಯಂತಹ ವಿಳಂಬಕ್ಕೆ ಕಾರಣವಾಗುವ ಯಾವುದೇ ವಿಷಯವನ್ನು ಪ್ರಸ್ತಾಪಿಸಬಾರದೆಂಬ ಭಾವನೆ ವ್ಯವಹಾರ ಸಮಿತಿಗೆ ಬರುವಂತಿದೆ. ಆದುದರಿಂದ ಸಂವಿಧಾನ ರಚನೆಯಾಗುವವರೆಗೆ, ಈಗಿರುವಂತಹ ಸದಸ್ಯರೇ ಮುಂದುವರೆಯಬೇಕೆಂಬುದು ನನ್ನ ಸಲಹೆ]*

**ಮಾನ್ಯ ಅಧ್ಯಕ್ಷರು :** *[ಯಾರು ಸಭೆಯ ಸದಸ್ಯರಾಗಿ ಮುಂದುವರೆಯಬೇಕು, ಮತ್ತಾರು ಕೂಡದು ಎಂಬ ಪ್ರಶ್ನೆ ಈಗ ಏಳುವುದಿಲ್ಲ, ಇಲ್ಲಿರುವ ತುಂಬ ಸರಳವಾದ ನೇರವಾದ ಪ್ರಶ್ನೆಯೆಂದರೆ ಸಮಿತಿ ಸಲ್ಲಿಸಿರುವ ವೇಳಾಪಟ್ಟಿಯನ್ನು ತಾವು ಒಪ್ಪುತ್ತೀರೋ ಇಲ್ಲವೋ ಎಂಬುದು. ಭಾಷೆಯ ಪ್ರಶ್ನೆ ನಮ್ಮ ಮುಂದಿಲ್ಲ. ಈ ಸಂದರ್ಭದಲ್ಲಿ ತಮ್ಮ ಟೀಕೆಗಳು ಅಪ್ರಸ್ತುತ. ಸದನದ ಮುಂದಿರುವ ವೇಳಾಪಟ್ಟಿ ಮತ್ತಿತರ ಪ್ರಶ್ನೆಗಳ ಬಗ್ಗೆ

ತಾವು ಹೇಳುವುದೇನಿದೆ.]*

**ಶ್ರೀ ಆರ್.ವಿ. ಧುಲೇಕರ್** : *[ಕ್ಷಮಿಸಿ, ಇದುವರೆಗೆ ತಮ್ಮೆಲ್ಲ ವೇಳೆಯನ್ನು ವಿನಿಯೋಗಿಸಿರುವ ಸದಸ್ಯರು ಸಂವಿಧಾನ ರಚನೆಯಾಗುವವರೆಗೆ ಮುಂದುವರೆಯಬೇಕೆಂಬುದು ನನ್ನ ನಿವೇದನೆ]*

**ಮಾನ್ಯ ಅಧ್ಯಕ್ಷರು** : *[ಮತ್ತದೆ ಪ್ರಶ್ನೆ. ನಾನಾಗಲೆ ತಮಗೆ ಹೇಳಿದ್ದೇನೆ. ಈ ಸದನಕ್ಕೂ ತಿಳಿಸಿದ್ದೇನೆ. ಸದಸ್ಯರು ರಾಜೀನಾಮೆ ಕೊಡುವವರೆಗೆ ಸಭೆಯಲ್ಲಿ ಮುಂದುವರೆಯುತ್ತಾರೆ. ಇಲ್ಲಿ ಯಾರಾದರೂ ಉಳಿಯಲು ಬಯಸಿದರೆ, ಆಗ ಈ ಪ್ರಶ್ನೆ ಏಳುವುದಿಲ್ಲ.]

**ಶ್ರೀ ಆರ್.ವಿ. ಧುಲೇಕರ್** : *[ಸ್ವಾಮಿ, ನನಗೆ ಇನ್ನೂ ಸಮಾಧಾನವಾಗಿಲ್ಲ. ನಾನು ಇನ್ನೊಂದು ಮಾತು ಹೇಳುವುದಿದೆ. ಈಗಾಗಲೆ ನಡೆದಿರುವ ಕಾರ್ಯಕಲಾಪಗಳ ಪುನರಾವಲೋಕನಕ್ಕೆ ಒಂದು ಅವಕಾಶವನ್ನು ಈ ಸಭೆಗೆ ಕೊಡಬೇಕು. ಮತ್ತೆ ಮುಂದಿನ ಕಾರ್ಯಕ್ರಮಗಳ ಮುನ್ನೋಟಕ್ಕೆ ಅವಕಾಶವಿರಬೇಕು. ಇದಿಷ್ಟೆ ನಾನು ಹೇಳಬಯಸುವುದು.

**ಹಾಜಿ ಅಬ್ದುಲ್ ಸತ್ತಾರ್ ಹಾಜಿ ಇಷಾಕ್ ಸೇಠ್** (ಮದ್ರಾಸ್ : ಮುಸ್ಲಿಮ್) : ನಾನೊಂದು ವಿಷಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಈ ಪ್ರಮುಖ ತಿದ್ದುಪಡಿಯ ಪ್ರತಿಯನ್ನು ಸಭೆಯ ಸದಸ್ಯರಿಗೆ ವಿತರಿಸಿಲ್ಲ. ನಾನು ತಿದ್ದುಪಡಿಗೆ ಆಕ್ಷೇಪಿಸುತ್ತಿಲ್ಲ. ಅದು ಮುಖ್ಯವಾದ ತಿದ್ದುಪಡಿ– ಅದಕ್ಕೆ ನನ್ನ ಬೆಂಬಲವಿದೆ. ಆದರೆ ಅದರ ಪ್ರತಿಯ ಗೈರಿನಲ್ಲಿ, ತಿದ್ದುಪಡಿಯನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಅಂತಹ ಮುಖ್ಯ ತಿದ್ದುಪಡಿಗಳನ್ನು ಸಾಧ್ಯವಾದಷ್ಟು ಸಕಾಲಕ್ಕೆ, ಸಭೆಯಲ್ಲಿ ವಿತರಿಸಲು ತಮ್ಮ ನೆರವನ್ನೂ ಕೋರಬಹುದೆ?

**ಸನ್ಮಾನ್ಯ ಅಧ್ಯಕ್ಷರು** : ತಮ್ಮ ಸಲಹೆಗೆ ನನ್ನ ಸಂಪೂರ್ಣ ಸಹಮತವಿದೆ. ಎಲ್ಲ ಮುಖ್ಯ ತಿದ್ದುಪಡಿಗಳ ಬಗ್ಗೆ ಸೂಕ್ತ ಸಮಯದಲ್ಲಿ ನೋಟೀಸ್ ಕೊಟ್ಟರೆ, ಸದಸ್ಯರು ಅದನ್ನು ಪರಾಮರ್ಶಿಸಬಹುದು.

**ಪಂಡಿತ್ ಹೃದಯನಾಥ್ ಕುಂಜ್ರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಸನ್ಮಾನ್ಯ ಅಧ್ಯಕ್ಷರು ಸ್ವಲ್ಪ ದನಿ ಎತ್ತರಿಸಿ ಮಾತನಾಡಿ ಎಂದು ತಮ್ಮನ್ನು ಕೋರಬಹುದೆ?

ತಾವು ಧ್ವನಿವರ್ಧಕದ ಮೂಲಕ ಮಾತನಾಡುತ್ತಿದ್ದಾಗಲೂ, ನಮಗೆ ನಿಮ್ಮ ದನಿ ಕೇಳಿಬರುತ್ತಿರಲಿಲ್ಲ.

**ಮಾನ್ಯ ಅಧ್ಯಕ್ಷರು** : ಕ್ಷಮಿಸಿ, ಈ ಹಿಂದೆ ಯಾರೂ ಆಕ್ಷೇಪಿಸಿರಲಿಲ್ಲ.

**ಶ್ರೀ ಪಂಡಿತ್ ಹೃದಯನಾಥ್ ಕುಂಜ್ರು** : ಈಗ ಕೇಳಿಸುತ್ತಿದೆ.

**ಮಾನ್ಯ ಅಧ್ಯಕ್ಷರು** : ಆದರೆ ನಾವೀಗ ಜೋರಾಗಿ ಮಾತನಾಡುತ್ತಿದ್ದೇವೆ ಎನಿಸುತ್ತಿಲ್ಲ.

**ಪಂಡಿತ್ ಜವಹರ್ ಲಾಲ್ ನೆಹರು** (ಉತ್ತರ ಪ್ರದೇಶ : ಸಾಮಾನ್ಯ) : ಅದು ನಿಮ್ಮ ಮತ್ತು ಧ್ವನಿವರ್ಧಕದ ಅಂತರದ ಪ್ರಶ್ನೆ ಅಷ್ಟೆ.

**ಶ್ರೀ ಎಂ. ಅನಂತಶಯನಂ ಅಯ್ಯಂಗಾರ್** (ಮದ್ರಾಸು : ಸಾಮಾನ್ಯ) : ಶ್ರೀ ಮುನ್ಷಿಯವರು ತಮ್ಮ ಪ್ರಸ್ತಾವವನ್ನು ಮಂಡಿಸುವಾಗ ಆಡಿದ ಮಾತುಗಳ ಬಗ್ಗೆ ನನ್ನ ಒಂದೆರಡು ಮಾತುಗಳು. ಈಗ ನಡೆದಿರುವ ವಿದ್ಯಮಾನಗಳು ನನಗೆ ಸಂತಸ ತರುತ್ತಿಲ್ಲ. ಪ್ರಸ್ತುತ ಸನ್ನಿವೇಶದಲ್ಲಿ ನಾನು ಮತ್ತು ನನ್ನಂತೆ ಹಲವಾರು ಈ ಪರಿಹಾರ ಅತ್ಯಂತ ಸೂಕ್ತವೆಂಬ ನಿಲುವಿಗೆ ತಲೆಯೊಡ್ಡುವುದು ಅನಿವಾರ್ಯವಷ್ಟೆ. ಭಾರತ ಒಕ್ಕೂಟದ ನಿವಾಸಿಗಳಾಗಿ, ಮುಸ್ಲಿಮ್ ಲೀಗ್‌ನ ಸದಸ್ಯರು ಸದನಕ್ಕೆ ಆಗಮಿಸಿರುವುದು ಸಂತೋಷ. ಇಡೀ ಭಾರತಕ್ಕೆ ಇಲ್ಲಿ ಪ್ರಾತಿನಿಧ್ಯ ದೊರೆತಿದ್ದರೆ ನನಗೆ ಇನ್ನೂ ಹೆಚ್ಚಿನ ಸಂತೋಷವಾಗುತ್ತಿತ್ತು. ನನ್ನ ಮಿತ್ರ ಶ್ರೀ ಮುನ್ಷಿಯವರು ಅಖಂಡ ಹಿಂದುಸ್ತಾನ್ ಪರ ಇದ್ದವರು ಈಗ ಅಷ್ಟೇ ತೀವ್ರವಾಗಿ ಈ ನಿಲುವನ್ನು ಬೆಂಬಲಿಸುತ್ತಿರುವುದು ನನಗೆ ಅಚ್ಚರಿ ತಂದಿದೆ. ನನ್ನ ವೈಯಕ್ತಿಕ ಅಭಿಪ್ರಾಯದಂತೆ, ಮೇ ೧೬ರ ಪರಿಹಾರವೆ ಅತ್ಯುತ್ತಮವಾಗಿತ್ತು. ಅದನ್ನು ಕೈಬಿಟ್ಟಿದ್ದು, ವಿಷಾದನೀಯ. ಈಗ ಅದರ ಬಗ್ಗೆ ನಾವು ಚಿಂತಿಸುವುದು ಬೇಡ. ಪ್ರಸ್ತುತ ಸನ್ನಿವೇಶದಲ್ಲಿ, ಏನೆಲ್ಲ ಸಂಭವಿಸಿದೆಯೋ ಅವೆಲ್ಲವೂ ಅತ್ಯುತ್ತಮವೆನಿಸಿದರೂ, ನಾವೆಲ್ಲರೂ ಒಂದಾಗುವ ದಿನಕ್ಕೆ

ಆಶಾಭಾವನೆಯಿಂದ ಕಾದು ನೋಡೋಣ. ಮೇ ೧೬ರ ಪರಿಹಾರವನ್ನು ಸರ್ವಾನುಮತದಿಂದ ಅನುಮೋದಿಸಿದ್ದಿದ್ದರೆ ಬಂಗಾಲ, ಪಂಜಾಬ್ ವಾಯವ್ಯ ಗಡಿನಾಡಿನ ಪ್ರತ್ಯೇಕತೆ, ಸಿಲ್ಹಟ್‌ನ ತ್ಯಾಗವೆಲ್ಲವೂ ತಪ್ಪಬಹುದಿದಿತ್ತು.

**ಮಾನ್ಯ ಅಧ್ಯಕ್ಷರು :** ನಿಮ್ಮ ಮಾತಿಗೆ ನನ್ನ ಸಂಪೂರ್ಣ ಸಹಮತವಿದೆ. ಆದರೆ ನೀವು ಮಿ। ಮುನ್ಷಿಯವರನ್ನು ತರಾಟೆಗೆ ತೆಗೆದುಕೊಂಡರೆ ಪ್ರಯೋಜನವಿಲ್ಲ.

**ಶ್ರೀ ಎಸ್.ಎಚ್. ಪ್ರೇಟರ್** (ಮದ್ರಾಸು : ಸಾಮಾನ್ಯ) : ಮಾನ್ಯರೆ, ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಹೊಸ ಪ್ರಾಂತೀಯ ಸಂವಿಧಾನದ ನಿಯಮಗಳನ್ನು ನಾವೀಗ ಪರಿಶೀಲಿಸುತ್ತಿದ್ದೇವೆ. ಅವು ಅಲ್ಪಸಂಖ್ಯಾತರ ಮೇಲೆ ಗಾಢವಾಧ ಪರಿಣಾಮ ಬೀರಲಿವೆ. ಈ ನಿಯಮಗಳನ್ನು ಪ್ರಸ್ತುತ ಅಧಿವೇಶನದಲ್ಲಿ ಅಂಗೀಕರಿಸಿ ನಿರ್ಧಾರ ತೆಗೆದುಕೊಳ್ಳಬೇಕು. ಆದುದರಿಂದ, ಅಲ್ಪಸಂಖ್ಯಾತರ ಸಮಿತಿಗೆ ಅವಕಾಶ ನೀಡಿ ನಿಯಮಗಳನ್ನು ಪರಿಶೀಲಿಸುವಂತೆ ಸೂಚಿಸಬೇಕು. ಮತ್ತು ಸಮಿತಿಯ ಅಭಿಪ್ರಾಯಗಳನ್ನು ಸಭೆಯಲ್ಲಿ ಪರಿಶೀಲಿಸಬಹುದು. ನಂತರ ಅವುಗಳನ್ನು ಅಂತಿಮವಾಗಿ ಅಂಗೀಕರಿಸಬಹುದು. ಆದುದರಿಂದ, ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಶ್ರೀ ಜೈಪಾಲ್ ಸಿಂಗ್ :** ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಸಂತಾನಂ ಮಂಡಿಸಿದ ತಿದ್ದುಪಡಿಗೆ ನನ್ನ ಹಾರ್ದಿಕ ಬೆಂಬಲವಿದೆ. ನಾವೆಲ್ಲರೂ ಇಲ್ಲಿಯ ವ್ಯವಹಾರಗಳನ್ನು ತ್ವರಿತಗೊಳಿಸುವ ಅಗತ್ಯವನ್ನು ಮನಗಂಡಿದ್ದೇವೆ. ಹೊರಗುಳಿದ ಪ್ರದೇಶಗಳ ಉಪಸಮಿತಿ ವರದಿಯನ್ನು ಈ ಅಧಿವೇಶನದಲ್ಲಿ ಮಂಡಿಸುವುದು ಸಾಧ್ಯವೇ ಇಲ್ಲವೆಂದೆನಿಸುತ್ತದೆ. ಬಹುಮುಖ್ಯವಾದ ನಿಯಮಗಳನ್ನು ಕುರಿತು ಈ ಅಧಿವೇಶನದಲ್ಲಿ ನಿರ್ಧಾರ ಕೈಗೊಳ್ಳಬೇಕೆಂದು ಸಲಹೆ ಮಾಡಲಾಗಿದೆ. ಆದರೆ ಈಗಿನ ವಸ್ತುಸ್ಥಿತಿಯಂತೆ ಹೊರಗುಳಿದ ಮತ್ತು ಭಾಗಶಃ ಹೊರಗುಳಿವ ಪ್ರದೇಶಗಳ ಉಪಸಮಿತಿ, ಇನ್ನೂ ಬಿಹಾರದ ಪ್ರದೇಶಗಳಿಗೆ ಭೇಟಿ ನೀಡುವುದರಲ್ಲೆ ಇದೆ. ಅಂತೆಯೇ ಸಂಯುಕ್ತ ಪ್ರಾಂತ್ಯಗಳಿಗೆ ಭೇಟಿ ನೀಡಿಲ್ಲ. ಈ ಎರಡು ಪ್ರದೇಶಗಳಿಗೆ ಮಳೆಗಾಲದಲ್ಲಿ ಹೋಗಲಾಗದು. ಹೀಗಾಗಿ, ಶ್ರೀ ಮುನ್ಷಿಯವರ ಸಲಹೆಯಂತೆ, ಆದಿವಾಸಿ ಸಮಸ್ಯೆ ಮತ್ತು ಅವರನ್ನು ಬಾಧಿಸುವ ಪ್ರಮುಖ ಸಮಸ್ಯೆಗಳು ಈ ಅಧಿವೇಶನದಲ್ಲಿ ಬಗೆಹರಿದಾವೋ ಇಲ್ಲವೋ ತಿಳಿಯದು.

ಶ್ರೀ ಪ್ರೇಟರ್, ಸೂಚಿಸಿದಂತೆ ಈ ಒಕ್ಕೂಟದ ಯಾವುದೇ 'ಭಾಗ' ಆ ಪದದ ಬಳಕೆಗಾಗಿ ವಿಷಾದಿಸುತ್ತೇನೆ– ಯಾವುದೇ 'ಭಾಗ'ವನ್ನು ತೀವ್ರವಾಗಿ ಬಾಧಿಸುವ ವಿಷಯಗಳ ಪರಿಶೀಲನೆಯಿಂದ ಅದರ ನಿವಾಸಿಗಳು ದೂರವಿರಬಾರದು. ಆಗಸ್ಟ್ ತಿಂಗಳ ಕೊನೆಯವರೆಗೆ ಬುಡಕಟ್ಟು ಉಪಸಮಿತಿಯ ವರದಿಯು ಸಿದ್ಧವಾಗುವುದು ಸಾಧ್ಯವಿಲ್ಲವೆಂದಷ್ಟೆ ನಾನು ತಿಳಿಯಲು ಬಯಸುತ್ತೇನೆ.

**ಶ್ರೀ ಅಜೀಜ್ ಅಹ್ಮದ್ ಖಾನ್** (ಉತ್ತರ ಪ್ರದೇಶ : ಮುಸ್ಲಿಮ್) : *[ಸನ್ಮಾನ್ಯ ಅಧ್ಯಕ್ಷರೆ, ನಾನು ಶ್ರೀ ಮುನ್ಷಿ ಯವರು ಮಂಡಿಸಿದ ಪ್ರಸ್ತಾವವನ್ನು ವಿರೋಧಿಸುತ್ತೇನೆ. ಹಾಗೆಯೇ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಸರ್, ನಿಮ್ಮೊಂದು ಅಭಿಪ್ರಾಯಕ್ಕೆ ನನ್ನ ಸಹಮತವಿದೆ. ಅದೆಂದರೆ ಈ ವೈಭವೋಪೇತ ಕರ್ತವ್ಯ ನಿರ್ವಹಣೆಯಲ್ಲಿ ನಾವು ಅನೇಕಾನೇಕ ಸಮಸ್ಯೆಯನ್ನು ಬಗೆಹರಿಸಬೇಕಿದೆ. ಅವುಗಳ ಆಮೂಲಾಗ್ರ ಪರಿಶೀಲನೆಯಿಲ್ಲದೆ, ತರಾತುರಿಯಿಂದ ವ್ಯವಹಾರಗಳನ್ನು ಮುಕ್ತಾಯಗೊಳಿಸುವುದು ನಮಗೆ ಯುಕ್ತವೆನಿಸುವುದಿಲ್ಲ. ಅದು ಸಭ್ಯತೆಯಲ್ಲ ಮಾನ್ಯರೆ, ತಾವು ಹೇಳಿದಂತೆ ಎಲ್ಲವನ್ನೂ ಇತ್ಯರ್ಥಗೊಳಿಸುವುದಕ್ಕೆ ನಮಗಿರುವ ಸಮಯ ಅತ್ಯಲ್ಪ. ಕಾರ್ಯ ಅಗಾಧ. ಅದೇ ವೇಳೆ ನಾವು ಅತಿ ಜಾಗರೂಕತೆಯಿಂದ ಸಂವಿಧಾನವನ್ನು ರಚಿಸಬೇಕೆಂಬುದನ್ನು ಮನಗಾಣಬೇಕು. ಇದಕ್ಕೆ ವ್ಯತಿರಿಕ್ತವಾಗಿ ಮೂರೂ ಸಮಿತಿಗಳ ವರದಿಯನ್ನು ಪೂರ್ಣಗೊಳಿಸಿದ ಮೇಲೆ ಅಂತಹ ಪ್ರಮುಖ ವರದಿಯನ್ನು ಸಭೆಯ ಮುಂದಿಡುವ ಅಗತ್ಯವಿಲ್ಲವೆಂದು, ಪ್ರಸ್ತಾವದ ಪ್ರಸ್ತಾವಕರು ಅಭಿಪ್ರಾಯಪಡುತ್ತಾರೆ. ಅದರಂತೆ ಭಾರತ ಸಂವಿಧಾನದಲ್ಲಿ ಕೆಲವು ಪ್ರಕರಣಗಳನ್ನು ಸೇರಿಸುತ್ತಾರೆ. ನಿಲುವಳಿಯು ಹೀಗಿದೆ:

"ಅದರಂತೆ ಸಂವಿಧಾನ ಕರಡು ಪರಿಶೀಲನೆ ಮಾಡುವ ಉದ್ದೇಶದಿಂದ ಅಧ್ಯಕ್ಷರು ಅಕ್ಟೋಬರ್ ತಿಂಗಳ ವೇಳೆಗೆ ತಿಂಗಳ ಆದಿಭಾಗದಲ್ಲಿ ಅಧಿವೇಶನದ ಕರೆಯಲು ಸಭೆ ಅಧಿಕಾರ ನೀಡಬೇಕೆಂದು ಪ್ರಸ್ತಾವಿಸುತ್ತೇವೆ."

ಮಾನ್ಯರೆ, ಮೂಲಭೂತ ಹಕ್ಕುಗಳ ಮಟ್ಟಿಗೆ ಹೇಳುವುದಾದರೆ, ಜಾಗರೂಕತೆಯಿಂದ ಪರಿಶೀಲಿಸಿ, ನಮ್ಮ ಅಭಿಪ್ರಾಯಗಳನ್ನು ಸಂವಿಧಾನ ನಿರ್ಮಾತೃಗಳಿಗೆ ತಲುಪಿಸಲು ನಮಗೊಂದು ಅವಕಾಶ ಬೇಕು.

**ಮಾನ್ಯ ಅಧ್ಯಕ್ಷರು :** *[ಮೂಲಭೂತ ಹಕ್ಕುಗಳ ವಿಷಯಕ್ಕೆ ಬಂದಾಗ ಸಂವಿಧಾನ ರಚನಾಸಭೆ ಅವುಗಳನ್ನು ಜಾಗರೂಕತೆಯಿಂದ ಪರಿಶೀಲಿಸಿದೆ. ಈಗ ಕೇವಲ ಅಲ್ಪಸಂಖ್ಯಾತರ ಸಮಿತಿ ಮತ್ತು ಬುಡಕಟ್ಟು ಪ್ರದೇಶಗಳ ಸಮಿತಿಯ ವರದಿಯನ್ನಷ್ಟೆ ಪರಿಶೀಲಿಸಬೇಕಿದೆ].*

**ಶ್ರೀ ಅಜೀಜ್ ಅಹ್ಮದ್ ಖಾನ್ :** *[ಹಾಗಿದ್ದರೆ, ನಿಲುವಳಿಯ ವಾಕ್ಯರಚನೆಯಲ್ಲಿ ತಪ್ಪಿದೆ. ಏಕೆಂದರೆ, ನಿಲುವಳಿಯಲ್ಲಿ ಈಗಿರುವಂತೆ ಮೂಲಭೂತ ಹಕ್ಕಿನ ಸಮಿತಿಯನ್ನು ಸ್ಪಷ್ಟವಾಗಿ ಸೇರಿಸಲಾಗಿದೆ. ಬುಡಕಟ್ಟು ಪ್ರದೇಶದ ಸಮಿತಿಗೆ ಸಂಬಂಧಿಸಿದಂತೆ ಹೇಳುವುದಾದರೆ. ಪ್ರಸ್ತುತ ಸನ್ನಿವೇಶದಲ್ಲಿ ಪ್ರಾಯಶಃ ಅದು ವ್ಯರ್ಥವೆಂದೆನಿಸುತ್ತದೆ. ಅದೇಕೆ ಹಾಗೆ? ಕಾರಣ, ನನಗಿಂತ ತಾವು ಚೆನ್ನಾಗಿ ಬಲ್ಲಿರಿ, ಆದರೆ ಅಲ್ಪಸಂಖ್ಯಾತರ ಸಮಿತಿಯ ವರದಿಯನ್ನು ಸಂವಿಧಾನದಲ್ಲಿ ಪ್ರಕ್ಷಿಪ್ತಗೊಳಿಸುವ ಮುನ್ನ ಅದನ್ನು ಸಭೆಯಲ್ಲಿ ಮಂಡಿಸುವುದು ಉಚಿತ. ಅದರ ಬಗ್ಗೆ ಚರ್ಚಿಸುವುದಕ್ಕೆ ನಮಗೆ ಸಂಪೂರ್ಣ ಅವಕಾಶವಿರಬೇಕು. ನಾವು ನಮ್ಮೆಲ್ಲರ ಅತ್ಯುತ್ತಮ ಸಲಹೆ ಸೂಚನೆಗಳನ್ನು ನೀಡಿದ ನಂತರ ಈ ಸಂಬಂಧ ನಿರೂಪಿಸಿದ ಪ್ರಕ್ರಿಯೆಗೆ ಅನುಗುಣವಾಗಿ ಅದರ ಕರಡು ಸಿದ್ಧಗೊಳ್ಳಬೇಕು. ಅದುದರಿಂದ, ಗೌರವಾನ್ವಿತ ಅಧ್ಯಕ್ಷರು ತಮ್ಮ ಉದ್ಘಾಟನಾ ಭಾಷಣದಲ್ಲಿ ತಿಳಿಸಿದಂತೆ, ಇಂತಹ ವಿಷಯಗಳಲ್ಲಿ ನಾವು ಅವಸರಪಟ್ಟು ಇಡೀ ಕಾರ್ಯವನ್ನು ಗೊಂದಲಕ್ಕೀಡು ಮಾಡಬಾರದು. ಆ ರೀತಿಯ ನಿಲುವು ತಾಳಿದ್ದೇವೆ. ಹಾಗಾಗಿ, ನಾನು ಈ ಪ್ರಸ್ತಾವವನ್ನು ವಿರೋಧಿಸುತ್ತೇನೆ ಮತ್ತು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.]*

**ಶ್ರೀ ಮೋಹನ್ ಸಿನ್ಹ ಮೆಹ್ತಾ :** (ಉಯದ್‌ಪುರ್ ರಾಜ್ಯ) : ಮಾನ್ಯರೆ ನನ್ನ ಭಾವನೆಯಲ್ಲಿ ತಪ್ಪಿರಬಹುದು. ನಾನು ತಿಳಿದಿರುವಂತೆ ಶ್ರೀ ಮುನ್ಷಿಯವರು ತಮ್ಮ ಭಾಷಣದಲ್ಲಿ ಸಂತಾನಮ್ ಅವರು ತಿದ್ದುಪಡಿಯನ್ನು ಮಂಡಿಸುವ ಬಗ್ಗೆ ತಮಗೆ ಗೊತ್ತಿತ್ತೆಂದು ಹೇಳಿದಂತಿದೆ.

**ಮಾನ್ಯ ಅಧ್ಯಕ್ಷರು :** ಶ್ರೀ ಮುನ್ಷಿ ತಾವಾಗಲೆ, ಸಂತಾನಮ್ ಅವರು ಮಂಡಿಸುವ ತಿದ್ದುಪಡಿಯನ್ನು ಅಂಗೀಕರಿಸುವುದಾಗಿ ತಿಳಿಸಿದರು. ಔಪಚಾರಿಕವಾಗಿ ಶ್ರೀ ಸಂತಾನಮ್ ತಿದ್ದುಪಡಿಯನ್ನು ಮಂಡಿಸುವ ಮುನ್ನ ಶ್ರೀ ಮುನ್ಷಿ ಅದನ್ನು ಅಂಗೀಕರಿಸಿದ್ದಾರೆ.

**ಪಂಡಿತ್ ಜವಹರ್‌ಲಾಲ್ ನೆಹರು :** *[ಸನ್ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿಯವರೆಗೆ ಎಲ್ಲ ಭಾಷಣಗಳನ್ನೂ ಕಿವಿಗೊಟ್ಟು ಕೇಳಿದ್ದೇನೆ. ಆದರೆ ಈ ವಿಷಯದ ಬಗ್ಗೆ ಇಷ್ಟೊಂದು ಭಾಷಣಗಳು ಏಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ ದುರದೃಷ್ಟವಶಾತ್, ನನಗೆ ಶ್ರೀ ಮುನ್ಷಿಯವರ ಭಾಷಣವೂ ಸರಿಯಾಗಿ ಅರ್ಥವಾಗಲಿಲ್ಲ. ಏನೇ ಆಗಲಿ ಇದೊಂದು ಸರಳವಾದ ವಿಷಯ. ನಮ್ಮ ಮುಂದಿನ ಕಾರ್ಯಕ್ರಮವೇನು ಮತ್ತು ಅದರ ವಿಷಯಗಳೇನು ಎಂಬುದನ್ನು ನಾವು ನಿರ್ಧರಿಸಬೇಕು. ಈ ಕಾರ್ಯ ಈ ಅಧಿವೇಶನದಲ್ಲಿಯೆ ಪೂರೈಸುವುದೆ ಅಥವಾ ಮುಂದಿನ ಅಧಿವೇಶನದಲ್ಲಿಯೆ ಎಂಬುದು ನಮಗೆ ಸಂಬಂಧಪಟ್ಟಿಲ್ಲ, ಆದರೆ ನಮ್ಮ ಮುಂದೆ ಒಂದು ವಾಸ್ತವಿಕ ಯೋಜನೆ ಇರಬೇಕು. ಶ್ರೀ ಮುನ್ಷಿಯವರು ನಮ್ಮ ಮುಂದೆ ಯೋಜನೆಯೊಂದನ್ನು ಇಟ್ಟಿದ್ದಾರೆ. ಅದರ ಬಗ್ಗೆ ನಾವು ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಇಷ್ಟಕ್ಕೂ ಈ ವಿವಾದ ಏತರ ಬಗ್ಗೆ? ಈ ಅಧಿವೇಶನದಲ್ಲಿ ಎಷ್ಟು ಸಾಧ್ಯವೋ ಅಷ್ಟು ಕೆಲಸವನ್ನು ಮಾಡಿ, ಉಳಿದುದನ್ನು ಅಕ್ಟೋಬರ್ ಇಲ್ಲವೆ ನವೆಂಬರ್ ತಿಂಗಳಲ್ಲಿ ಕಾರ್ಯಗತಗೊಳಿಸಬೇಕು.]*

**ಶ್ರೀ ಮಹಮ್ಮದ್ ಷರೀಫ್** (ಮೈಸೂರು ರಾಜ್ಯ) : *[ಸನ್ಮಾನ್ಯ ಅಧ್ಯಕ್ಷರೆ, ಮೌಲ್ವಿ ಅಜೀಜ್ ಅಹ್ಮದ್ ಅವರ ಮಾತನ್ನು ನಾನು ಅನುಮೋದಿಸುತ್ತೇನೆ. ಅಲ್ಪಸಂಖ್ಯಾತರ ಸಮರ್ಪಕ ರಕ್ಷಣೆ ಮಂಜೂರಾದ ಹೊರತು, ಯಾವ ನಿರ್ಣಯವೂ, ಕಾನೂನು ಹಾಗೂ ಯೋಜನೆಯೂ ಪ್ರಯೋಜನಕಾರಿಯಾಗದು ಎಂದು ಅವರು ತಮ್ಮ ಭಾಷಣದಲ್ಲಿ ತಿಳಿಸಿದ್ದರು. ಮೌಲ್ವಿ ಸಾಹೇಬರು, ತಮ್ಮ ಗಮನ ಸೆಳೆದ ನಿಯಮ ಅತಿ ಮುಖ್ಯವಾದುದು. ನಿಮಗೆ ಗೊತ್ತಿರುವಂತೆ, ಈ ಪ್ರಸ್ತಾವವನ್ನು ನೀವು ಅಂಗೀಕರಿಸಿದರೆ, ಅಲ್ಪಸಂಖ್ಯಾತರಲ್ಲಿ ವಿರೋಧ ಮತ್ತು ಅಪನಂಬಿಕೆಯ ವಾತಾವರಣ ಸೃಷ್ಟಿಯಾಗುತ್ತದೆ. ಆದುದರಿಂದ, ಅಲ್ಪಸಂಖ್ಯಾತರ ಪ್ರಶ್ನೆ ಕುರಿತು ತ್ವರಿತ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ಆ ಸಮಸ್ಯೆಗೆ ಪರಿಹಾರ ದೊರೆಯುವವರೆಗೆ ಈ ಪ್ರಸ್ತಾವಕ್ಕೆ ಬೆಂಬಲ ಸೂಚಿಸುವುದು ಪ್ರಸ್ತಾವವನ್ನು ಅಕಾಲಿಕ ನಿರ್ಧಾರವೆಂದು ನನಗನಿಸುತ್ತೆ. ಆದುದರಿಂದ, ನಾನು ಈ ನಿಲುವಳಿಯನ್ನು ವಿರೋಧಿಸುತ್ತೇನೆ. ಮತ್ತು ಅಜೀಜ್ ಅಹ್ಮದ್ ಸಾಹೇಬ್ ತಳೆದ ಪ್ರಸ್ತಾವಕ್ಕೆ ಸಂಪೂರ್ಣ ಬೆಂಬಲ ನೀಡುತ್ತೇನೆ.]*

**ಶ್ರೀ ಶ್ರೀಪ್ರಕಾಶ :** ಸನ್ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ತಿದ್ದುಪಡಿಯನ್ನು ಮತ್ತೊಮ್ಮೆ ಓದುತ್ತೀರಾ?

**ಮಾನ್ಯ ಅಧ್ಯಕ್ಷರು :** ಶ್ರೀ ಸಂತಾನಮ್ ಅವರು ಮಂಡಿಸಿದ ತಿದ್ದುಪಡಿ ಹೀಗಿದೆ; ಇದನ್ನು ನಿಲುವಳಿಯ ಕೊನೆಯಲ್ಲಿ ಸೇರಿಸಬೇಕು.

"ಮುಂದುವರೆದು, ೩ನೇ ಖಂಡಿಕೆಯನ್ನು ಹೊರತುಪಡಿಸಿ ವರದಿಯನ್ನು ಅಂಗೀಕರಿಸಬೇಕು. ಮೂಲಭೂತ ಹಕ್ಕುಗಳು, ಅಲ್ಪಸಂಖ್ಯಾತರು, ಬುಡಕಟ್ಟು ಮತ್ತು ಹೊರಗುಳಿದ ಪ್ರದೇಶಗಳ ಸಲಹಾ ಸಮಿತಿಗೆ, ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ, ಅಂಗೀಕಾರವಾಗುವ ಸಾಮಾನ್ಯ ನಿಯಮಗಳನ್ನು ಸದನದ ಪರಿಶೀಲನೆಗಾಗಿ, ಕೆಲ ದಿನಗಳು ಮುಂಚಿತವಾಗಿ, ಸಾಧ್ಯವಾದರೆ ಈ ಅಧಿವೇಶನ ಕೊನೆಗೊಳ್ಳುವ ಮುನ್ನ ರೂಪಿಸುವಂತೆ ಸೂಚಿಸುವುದು. ಸಂವಿಧಾನದ ಕರಡಿನಲ್ಲಿ ನಿಗದಿತಗೊಳ್ಳುವ ಮುನ್ನ, ಆ ನಿಯಮಗಳನ್ನು ಸದನವು ಅನುಮೋದಿಸುವುದು. ನಂತರ ೩ನೇ ಖಂಡಿಕೆಯಲ್ಲಿ ಪ್ರಸ್ತಾಪಿಸಿದಂತೆ ಪ್ರಕ್ರಿಯೆಯನ್ನು ಅನುಸರಿಸಿ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಗಿದೆ."

**ಬಿ. ಪಾಕರ್ ಸಾಹಿಬ್ ಬಹಾದೂರ್** (ಮದ್ರಾಸು : ಮುಸ್ಲಿಮ್) : ಸನ್ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲಿಗೆ, ನಾನು ಈಗ ಬಳಲುತ್ತಿರುವ ಒಂದು ದೌರ್ಬಲ್ಯವನ್ನು ಒಪ್ಪಿಕೊಳ್ಳಬೇಕಿದೆ. ನನ್ನದೊಂದು ಸಮಸ್ಯೆ. ಇಲ್ಲಿ ನಡೆದಿರುವ ಬಹುತೇಕ ವ್ಯವಹಾರಗಳು ನನಗೆ ಅರ್ಥವಾಗುತ್ತಿಲ್ಲ. ಆಂಗ್ಲ ಭಾಷೆಗಷ್ಟೆ ನನ್ನ ಲೌಕಿಕ ತಿಳಿವಳಿಕೆ ಸೀಮಿತ. ಆದುದರಿಂದ, ಇಲ್ಲಿ ನಡೆಯುವ ವ್ಯವಹಾರಗಳನ್ನು ಆಂಗ್ಲ ರೂಪಾಂತರಕ್ಕೆ ಏರ್ಪಾಡು ಮಾಡುವಂತೆ ಅಧ್ಯಕ್ಷರನ್ನು ಪ್ರಾರ್ಥಿಸುತ್ತೇನೆ. ಇಲ್ಲವಾದರೆ, ನಮಗೆ ಇಲ್ಲಿಯ ಕಾರ್ಯಕಲಾಪಗಳು ಅರ್ಥವಾಗುವುದಿಲ್ಲ. ಇಲ್ಲಿಯ ವ್ಯವಹಾರಗಳಲ್ಲಿ ನಾವು ಭಾಗವಹಿಸಲೂ ಆಗದು. ನಿಸ್ಸಂಶಯವಾಗಿ ನಮಗೊಂದು ಸರ್ವ ಸಮನ್ವಯವಾದ ಭಾಷೆಬೇಕು. ವಿಭಿನ್ನ ಭಾಷಿಕರ ನಡುವೆ ಸಂಪರ್ಕ ಕಲ್ಪಿಸುವ ಸಂಪರ್ಕ ಭಾಷೆ (Lingua tranca) ಅರ್ಥಾತ್ ಒಂದು ರಾಷ್ಟ್ರಭಾಷೆ ಬೇಕು. ಅದೆಲ್ಲವನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾವು ವಾಸ್ತವವನ್ನು ಯಥಾರೂಪ ಗ್ರಹಿಸಬೇಕು. ಸಂವಿಧಾನ ರಚನಾಸಭೆ ರಚನೆಯಾದ ನಂತರ ಅದರಲ್ಲಿ ಹಲವಾರು ಭಾಷೆಗಳ ಪರಿಚಯವಿರುವ ಸದಸ್ಯರು ಸೇರಿರುತ್ತಾರೆ. ಎಲ್ಲರೂ ಈ ಸದನದಲ್ಲಿ ಹಿಂದಿಯಾ ಉರ್ದು ಬಲ್ಲವರಲ್ಲವೆಂಬುದು ಎಲ್ಲರಿಗೂ ಗೊತ್ತು. ಇಂಗ್ಲಿಷ್ ಬಾರದ ಕೆಲವು ಸದಸ್ಯರು ಇರಬಹುದು. ಆದರೆ ಇಲ್ಲಿ ಬಹುತೇಕ ಸದಸ್ಯರಿಗೆ ಇಂಗ್ಲಿಷ್ ಗೊತ್ತಿದೆ ಎಂದುಕೊಳ್ಳುತ್ತೇವೆ. ವ್ಯವಹಾರಗಳು ಎಲ್ಲರಿಗೂ ತಿಳಿಯುವಂತೆ, ಅಧ್ಯಕ್ಷರು ಒಂದು ಸರ್ವಸಮನ್ವಯವಾದ ಭಾಷಾ ಮಾಧ್ಯಮವನ್ನು ಹುಡುಕುವುದಾದರೆ ಅದು ಬಹಳ ಉಪಯುಕ್ತವಾದ ಪ್ರಕ್ರಿಯೆಯಾದೀತು.

ಮಾನ್ಯರೆ, ಸದನದ ಮುಂದಿರುವ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಒಂದು ಮಾತು. ಆ ವಿಷಯವನ್ನು

ಕುರಿತು ಪ್ರಸ್ತಾಪಿಸುವುದಕ್ಕೆ ಮೊದಲು, ನಾವು ಮುಸ್ಲಿಮ್ ಲೀಗ್‌ನ ಸದಸ್ಯರು ಇಲ್ಲಿಗೆ ಬಂದ ಸನ್ನಿವೇಶದ ಬಗ್ಗೆ ಕೇವಲ ಒಂದು ಮಾತು ಹೇಳುವುದಿದೆ. ನಾವು ಇಲ್ಲಿಯ ವ್ಯವಹಾರಗಳಲ್ಲಿ ಭಾಗವಹಿಸುತ್ತಿರುವುದರ ಹಿನ್ನೆಲೆಯನ್ನು ಕುರಿತು ಹೇಳುವುದಿದೆ. ಇದೊಂದು ರಕ್ತಪಾತ ರಹಿತ ಘಟನೆ– ಭಾರತ ಮತ್ತು ಪಾಕಿಸ್ತಾನ ಎರಡಕ್ಕೂ ಏಕಕಾಲದಲ್ಲಿ ಸ್ವಾತಂತ್ರ್ಯ ದೊರೆತಿರುವುದು. ಇಂತಹ ಅಭೂತಪೂರ್ವ ಘಟನೆಯ ಫಲಶ್ರುತಿಯಾಗಿ ನಾವಿಲ್ಲಿ ಬಂದು ಸೇರಿದ್ದೇವೆ ಎಂಬುದು ತಮಗೆ ತಿಳಿದಿದೆ.

**ಹಲವಾರು ಗೌರವಾನ್ವಿತ ಸದಸ್ಯರು** : ಇಲ್ಲ ಇಲ್ಲ.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್** : ನನಗೆ ಚೆನ್ನಾಗಿ ಗೊತ್ತು. ಇಲ್ಲಿ ಹಲವಾರು ಸದಸ್ಯರು.....

**ಶ್ರೀ ದೇಬಿಪ್ರಸಾದ್ ಖೈತಾನ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಇದೊಂದು ಕ್ರಿಯಾಲೋಪ. ಗೌರವಾನ್ವಿತ ಸದಸ್ಯರ ಭಾಷಣ ತೀರಾ ಅಸಂಗತ. ಸದನದಲ್ಲಿ ಮಂಡಿಸಲಾದ ತಿದ್ದುಪಡಿಗೂ, ಅದಕ್ಕೂ ಅರ್ಥಾತ್ ಸಂಬಂಧವಿಲ್ಲ. ಅವರು ತಮ್ಮ ಭಾಷಣವನ್ನು ಸದನದ ಮುಂದಿರುವ ಪ್ರಸ್ತಾವಕ್ಕೆ ಮಾತ್ರ ಸೀಮಿತಗೊಳಿಸುವಂತೆ ಸೂಚಿಸಬೇಕೆಂದು ಅಧ್ಯಕ್ಷರಲ್ಲಿ ನನ್ನ ನಿವೇದನೆ.

**ಮಾನ್ಯ ಅಧ್ಯಕ್ಷರು** : ಆ ಕೆಲಸ ನನಗೆ ಬಿಡುವಂತೆ, ಗೌರವಾನ್ವಿತ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ. ಪಾಕರ್ ಸಾಹಿಬ್ ಬಹಾದೂರ್** : ನನಗೆ ಭಾವನೆಗಳು ಅರ್ಥವಾಗುತ್ತೆ ಸರ್, ಹಲವು ದಿಸೆಗಳಿಂದ ಯಾತನಾಮಯ ಭಾವನೆಗಳು ವ್ಯಕ್ತವಾಗುತ್ತಿದೆ. ಹಿಂದೊಮ್ಮೆ ಅಖಂಡ ಭಾರತವೆಂದು ಹೆಸರೆತ್ತಿದ ರಾಷ್ಟ್ರ ಆಕೃತಿಯಲ್ಲಿ ಕುಗ್ಗಿ ಮತ್ತೊಂದು ರಾಷ್ಟ್ರ ಪಾಕಿಸ್ತಾನ ಉದಯಿಸಿ....

**ಮಾನ್ಯ ಅಧ್ಯಕ್ಷರು** : ದಯಮಾಡಿ ತಾವು ಸದನದ ಮುಂದಿನ ಪ್ರಸ್ತಾವಕ್ಕೆ ಮಾತ್ರ ಮಾತನ್ನು ಸೀಮಿತಗೊಳಿಸುತ್ತೀರಾ.

**ಶ್ರೀ ಪಾಕರ್ ಸಾಹಿಬ್ ಬಹಾದೂರ್** : ನಾನೇಕೆ ಆ ವಿಷಯವನ್ನು ಪ್ರಸ್ತಾಪಿಸಿದೆನೆಂದರೆ ಕಾರಣ ಇಷ್ಟೆ. ಜಗತ್ತಿನ ಇತಿಹಾಸದಲ್ಲೆ ಅಭೂತಪೂರ್ವವೆನಿಸಿದ ಘಟನೆಯೊಂದರ ನಂತರ ನಾವಿಲ್ಲಿ ಸಂಧಿಸುತ್ತಿದ್ದೇವೆ.

ನಾವೆಲ್ಲರೂ ಇಲ್ಲಿ ಸೇರಿರುವುದಕ್ಕಾಗಿ ನಮ್ಮೆಲ್ಲರಿಗೂ ಸಂತೋಷ. ಶ್ರೀ ಮುನ್ಷಿಯವರು ಅಮೋಘವಾದ ಭಾಷಣ ಮಾಡಿದ್ದಾರೆ, ಅವರಿಗೆ ಅಭಿನಂದನೆಗಳು. ಅವರು ಮಾಡಿದ ಭಾಷಣದ ಹಿಂದಿರುವ ಅಮೋಘ ಭಾವನೆಗಳಿಗಾಗಿ ಅಭಿನಂದಿಸುತ್ತೇನೆ. ಈ ಒಂದು ಭಾಷಣ ಎಲ್ಲ ಸಂಬಂಧಿತ ಸದಸ್ಯರ ಒಮ್ಮತದಿಂದ ಸಹಕಾರಕ್ಕೆ ಇಂಬುಗೊಟ್ಟಿದೆ. ಮತ್ತೊಬ್ಬ ಗೌರವಾನ್ವಿತ ಸದಸ್ಯರು, ತಮ್ಮ ಭಾಷಣದಲ್ಲಿ ಎತ್ತಿದ ಅಪಸ್ವರ ನನಗೆ ಖೇದ ತಂದಿದೆ. ಅದು ವಿವೇಕರಹಿತವಾಗಿ ಆಡಿದ ಮಾತೆಂದು, ನಾನು ಅಂದುಕೊಂಡಿದ್ದೇನೆ. ನಾವು ವಾಸ್ತವವನ್ನು ಯಥಾರೂಪ ಗ್ರಹಿಸಬೇಕಾಗುತ್ತೆ. ವಿಭಜನೆಯ ವಿಷಯ ಬಂದಾಗ, ಅದು ಕೇವಲ ಎರಡು ಪ್ರಮುಖ ದೇಶಗಳ ನಡುವಣ ಒಪ್ಪಂದದಿಂದ ಆದುದು–ಈ ರಾಷ್ಟ್ರದ ಎರಡು ಮಹಾನ್ ಸಂಸ್ಥೆಗಳ ನಡುವಣ ಒಪ್ಪಂದ–ಕಾಂಗ್ರೆಸ್ ಮತ್ತು ಲೀಗ್ ಎರಡೂ ಸಂಸ್ಥೆಗಳು ಒಪ್ಪಿದ ಮೇಲೆ ವಿಷಾದಕ್ಕೆ ಎಡೆಯೆಲ್ಲಿ?

**ಮಾನ್ಯ ಅಧ್ಯಕ್ಷರು** : ಗೌರವಾನ್ವಿತ ಸದಸ್ಯರಿಗೆ ನೆನಪು ಮಾಡುತ್ತೇವೆ– ಅವರು ಸದನದ ಮುಂದಿರುವ ಪ್ರಸ್ತಾಪಕ್ಕೆ ತಮ್ಮ ಭಾಷಣವನ್ನು ಸೀಮಿತಗೊಳಿಸಲಿ ದುರದೃಷ್ಟವಶಾತ್ ಅವರು ತೀರಾ ವಿಷಯಾಂತರ ಮಾಡಿದ್ದಾರೆ.

**ಶ್ರೀ ಪಾಕರ್ ಸಾಹಿಬ್ ಬಹಾದೂರ್** : ಶ್ರೀ ಮುನ್ಷಿಯವರು ಪ್ರಸ್ತಾಪ ಮಾಡಿದ ವಿಷಯದ ಬಗ್ಗೆಯೇ ನಾನು ಮಾತನಾಡುತ್ತಿದ್ದೇನೆ. ಅವರ ಮಾತಿಗೆ ಉತ್ತರವಿತ್ತ ಮತ್ತೊಬ್ಬ ಗೌರವಾನ್ವಿತ ಸದಸ್ಯರ ಮಾತನ್ನು ಪ್ರಸ್ತಾಪಿಸುತ್ತಿದ್ದೇನೆ, ನನ್ನ ಮಾತು ತಮಗೆ ಅಸಂಗತವೆನಿಸಿದರೆ, ನಿಮ್ಮ ನಿರ್ಣಯಕ್ಕೆ ನಾನು ತಲೆಬಾಗುತ್ತೇನೆ. ಮುಂದೇನೂ ನಾನು ಮಾತನಾಡ ಬಯಸುವುದಿಲ್ಲ. ಶ್ರೀ ಮುನ್ಷಿ ಮುಸ್ಲಿಮರಿಗೆ, ಭಾರತದ ನಿಷ್ಠಾವಂತ ಪ್ರಜೆಯಾಗಿದ್ದು ಸಹಕರಿಸುವಂತೆ ಮನವಿ ಮಾಡಿದರು. ಅದನ್ನು ಉಲ್ಲೇಖಿಸುತ್ತಿದ್ದೇನಷ್ಟೆ. ಖಂಡಿತ ಅಂತಹ

ಆಶ್ವಾಸನೆ ನಮ್ಮಿಂದ ದೊರಕುತ್ತದೆ. ಮುಸ್ಲಿಮ್ ಲೀಗ್ ಸದಸ್ಯರು ನಿಷ್ಠೆಯಿಂದ ಸಂವಿಧಾನ ರಚನಾಸಭೆಗೆ ಸಹಕರಿಸುವರೆಂಬ ಭರವಸೆ ನೀಡುತ್ತೇವೆ. ಮುಸ್ಲಿಮ್ ಲೀಗ್ ಸದಸ್ಯರು ಸಹ ಪ್ರತಿಪಕ್ಷದ ಅದೇ ಪ್ರಮಾಣದ ಸಹಕಾರವನ್ನು ನಿರೀಕ್ಷಿಸುತ್ತಾರೆ.

ಮಾನ್ಯರೇ, ಈ ಪ್ರಸ್ತಾವದ ಮಟ್ಟಿಗೆ ಹೇಳುವುದಾದರೆ, ಖಂಡಿತವಾಗಿಯೂ ಪ್ರಸ್ತಾವವನ್ನು ಅಂಗಿಕರಿಸಬೇಕು. ಸಂತಾನಮ್ ಅವರ ತಿದ್ದುಪಡಿ ಕುರಿತು ಹೇಳುವುದಾದರೆ ನಾನು ಅದನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ.

**ಹಲವಾರು ಗೌರವಾನ್ವಿತ ಸದಸ್ಯರು :** ಪ್ರಸ್ತಾವವನ್ನು ಅಂಗೀಕರಿಸಬಹುದೆ ಎಂಬ ಪ್ರಶ್ನೆಯನ್ನು ಕೇಳಬಹುದು.

**ಪಂಡಿತ್ ಗೋವಿಂದವಲ್ಲಭ ಪಂತ್** (ಉತ್ತರ ಪ್ರದೇಶ : ಸಾಮಾನ್ಯ) : ನಾನು ಅದನ್ನು ಪಾಲಿಸಲಿದ್ದೆ. ನಿಲುವಳಿಯನ್ನು ಅಂಗೀಕರಿಸಬಹುದೆ?

**ಮಾನ್ಯ ಅಧ್ಯಕ್ಷರು :** ನಾನು ಆ ಪ್ರಸ್ತಾವವನ್ನು ಅಂಗೀಕರಿಸುತ್ತೇನೆ. ಸದನದಲ್ಲಿ ಮತ್ತಷ್ಟು ಚರ್ಚೆಗೆ ಆಸ್ಪದವಿರಲಾರದು ಎಂದುಕೊಂಡಿದ್ದೇನೆ. ಶ್ರೀ ಸಂತಾನಂ ಅವರ ತಿದ್ದುಪಡಿಯನ್ನು ಸದನದ ಮುಂದೆ ಮಂಡಿಸುತ್ತೇನೆ.

ತಿದ್ದುಪಡಿ ಅಂಗೀಕೃತವಾಯಿತು.

**ಮಾನ್ಯ ಅಧ್ಯಕ್ಷರು :** ತಿದ್ದುಪಡಿಯಾದ ಪ್ರಸ್ತಾವವನ್ನು ಸದನದ ಮುಂದಿಡುತ್ತೇನೆ.

ತಿದ್ದುಪಡಿಯಾದ ಪ್ರಸ್ತಾವ ಅಂಗೀಕೃತವಾಯಿತು.

## ನಿಯಮಗಳ ತಿದ್ದುಪಡಿ

**ಮಾನ್ಯ ಅಧ್ಯಕ್ಷರು :** ಮುಂದಿನ ಬಾಬ್ತು ನಿರ್ಣಯಗಳ ಸರಣಿ; ಸಂವಿಧಾನ ರಚನಾಸಭೆಯ ನಿಯಮಗಳ ತಿದ್ದುಪಡಿ ಕುರಿತದ್ದು. ಶ್ರೀ ಮುನ್ಷಿಯವರು ಮಂಡಿಸಲೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಂ. ಮುನ್ಷಿ :** ಸನ್ಮಾನ್ಯ ಅಧ್ಯಕ್ಷರೆ, ಸಂಚಾಲಕ ಸಮಿತಿಯ ಪರವಾಗಿ ತಿದ್ದುಪಡಿಗಳನ್ನು ಮಂಡಿಸುವ ಗೌರವ ನನ್ನ ಪಾಲಿಗೆ ಸಂದಿದೆ. ಇವು ವರದಿಯಲ್ಲಿ ಅಳವಡಿಸಿರುವ ರೀತಿಯಲ್ಲೆ ಇವೆ. ಒಂದಾದ ಮೇಲೊಂದರಂತೆ, ನಿಯಮಗಳನ್ನು ಮಂಡಿಸಲು ತಮ್ಮ ಅನುಮತಿ ಬೇಡುತ್ತೇನೆ.

"ಸಂವಿಧಾನ ರಚನಾಸಭೆಯ ನಿಯಮಗಳಿಗೆ ಕೆಳಕಂಡ ತಿದ್ದುಪಡಿಗಳನ್ನು ಪರಿಶೀಲಿಸಬೇಕು."

ನಿಯಮ ೨ : ಖಂಡ(ಬಿ)ದಲ್ಲಿ 'ವಿಭಾಗಗಳು ಅಥವಾ' ಪದಗಳನ್ನು, ಖಂಡ(ಎಫ್) ೫.೫೫ಅನ್ನು ತೆಗೆದುಹಾಕುವುದು.

**ಮಾನ್ಯ ಅಧ್ಯಕ್ಷರು :** ಯಾರಾದರೂ, ಈ ಬಗ್ಗೆ ಹೇಳಬಯಸುತ್ತೀರಾ? ಶ್ರೀ ಮುನ್ಷಿಯವರು ಮಂಡಿಸಿದ ಈ ಪ್ರಸ್ತಾವವನ್ನು ಸಭೆಯ ಮಂದಿಡುತ್ತೇನೆ.

(ಈ ಹಂತದಲ್ಲಿ ಕೆಲವರು ಸದಸ್ಯರು ತಮಗೆ ಪ್ರಕ್ರಿಯೆ ನಿಯಮಗಳ ಪ್ರತಿಗಳು ಕೈಸೇರಿಲ್ಲವೆಂದು ಹೇಳಿದರು).

ನನಗೆ ತಿಳಿದಂತೆ, ಸದಸ್ಯರು ವಿಳಾಸಗಳಿಗೆ ಪ್ರತಿಗಳು ಕಳುಹಿಸಿಕೊಡಲಾಗಿದೆ. ಆದರೂ ಕಛೇರಿಯಲ್ಲಿ ಲಭ್ಯವಿರುವ ಪ್ರತಿಗಳನ್ನು ಹೊಸ ಸದಸ್ಯರಿಗೆ ವಿತರಿಸಲಾಗುವುದು.

**ಶ್ರೀ ಸಾರಂಗಧರ ದಾಸ್ :** (ಪೂರ್ವ ರಾಜ್ಯಗಳ ಸಮೂಹ–೧) : ಚರ್ಚೆಯನ್ನು ನಾವು ನಾಳೆ ತೆಗೆದುಕೊಳ್ಳಬಹುದು.

**ಶ್ರೀ ಎ. ರಾಮಸ್ವಾಮಿ ಮೊದಲಿಯಾರ್ :** (ಮೈಸೂರು ರಾಜ್ಯ) : ಮಾನ್ಯರೆ, ನಿಯಮಗಳ ಪರಿಶೀಲನೆಯನ್ನು ನಾಳೆಗಿಟ್ಟುಕೊಳ್ಳೋಣ ಎಂಬ ಸಲಹೆಯನ್ನು ಬೆಂಬಲಿಸಲು ನಾನು ಇಚ್ಛಿಸುತ್ತೇನೆ.

**ಸನ್ಮಾನ್ಯ ಅಧ್ಯಕ್ಷರು :** ತಿದ್ದುಪಡಿಗಳು ಔಪಚಾರಿಕ ಸ್ವರೂಪ ಉಳ್ಳವು. ಆದರೂ ಸದಸ್ಯರು ಅವನ್ನು

ನಾಳೆಗೆ ಪರಿಶೀಲಿಸಲು ಬಯಸಿದರೆ, ನಾಳೆಗೇ ಮುಂದೂಡುವುದು ಅನಿವಾರ್ಯವಾಗುತ್ತಿದೆ. ಹಾಗಿದ್ದರೆ, ನಾವು ನಿರ್ಣಯಗಳನ್ನು ಕೈಗೆತ್ತಿಕೊಳ್ಳಬಹುದು. ಕೆಲವು ಸದಸ್ಯರು ತಮಗೆ ನಿಯಮಗಳ ಪ್ರತಿ ಕೈಸೇರಿಲ್ಲವೆಂದು ಆಕ್ಷೇಪಿಸಿದ್ದಾರೆ. ತಿದ್ದುಪಡಿಗಳನ್ನು ಮಂಡಿಸುವ ಮುನ್ನ ಅವುಗಳನ್ನು ಪಡೆಯಲು ಇಚ್ಛಿಸುತ್ತಾರೆ. ನಿಯಮಗಳನ್ನು ನಾಳೆವರೆಗೆ ಮುಂದೂಡದೆ ವಿಧಿಯಿಲ್ಲ. ಇತರ ಕೆಲವು ನಿರ್ಣಯಗಳನ್ನು ನಾವೀಗ ಪರಿಶೀಲಿಸಬಹುದು.

## ಸಮಿತಿಗಳಿಗೆ ಸದಸ್ಯರ ಚುನಾವಣೆ

**ಮಾನ್ಯ ಅಧ್ಯಕ್ಷರು** : ಮುಂದೆ, ಉಪಾಧ್ಯಕ್ಷರ ಚುನಾವಣೆ.

ಅದು ಇಂದು ನಡೆಯಲಾರದು. ಏಕೆಂದರೆ, ನಿಯಮದ ಬದಲಾವಣೆಯ ಪರಿಣಾಮವಾಗಿ ನಡೆಯತಕ್ಕದು. ಆದುದರಿಂದ ನಿಯಮಗಳ ತಿದ್ದುಪಡಿಗಳನ್ನು ಅಂಗೀಕರಿಸುವವರೆಗೆ ಮುಂದೂಡಬೇಕಾಗುತ್ತದೆ. ಶ್ರೀ ಸತ್ಯ ನಾರಾಯಣ ಸಿನ್ಹ ಅವರು ಮುಂದಿನ ಪ್ರಸ್ತಾವವನ್ನು ಮಂಡಿಸುವರು.

**ಡಾ. ಪಟ್ಟಾಭಿ ಸೀತಾರಾಮಯ್ಯ** : (ಮದ್ರಾಸ್ : ಸಾಮಾನ್ಯ) : ಇಬ್ಬರು ಉಪಾಧ್ಯಕ್ಷರನ್ನು ಚುನಾಯಿಸುವುದು ನಿಯಮ ವಿರೋಧಿ ಕ್ರಮವಲ್ಲ. ಆದುದರಿಂದ ನಾವು ಆ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದು.

**ಮಾನ್ಯ ಅಧ್ಯಕ್ಷರು** : ಅದನ್ನು ಅವರು ನಂತರ ತೆಗೆದುಕೊಳ್ಳುತ್ತಾರೆ.

**ಶ್ರೀ ಸತ್ಯನಾರಾಯಣ ಸಿನ್ಹ** : (ಬಿಹಾರ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ಪ್ರಸ್ತಾವ ಔಪಚಾರಿಕ ಸ್ವರೂಪವುಳ್ಳದ್ದು.

"ಈ ಸಭೆಯು ಸಂವಿಧಾನ ರಚನಾಸಭೆಯ (೪೧(೧)ನೇ ನಿಯಮದ ಅಡಿಯಲ್ಲಿ ಅಗತ್ಯಪಡಿಸಿರುವ ಕ್ರಮದಂತೆ, ಈರ್ವರು ಸದಸ್ಯರನ್ನು ಸಿಬ್ಬಂದಿ ಹಾಗೂ ಹಣಕಾಸು ಸಮಿತಿಯ ಸದಸ್ಯರನ್ನಾಗಿ ಚುನಾಯಿಸಲು ಮುಂದುವರೆಯವಂತೆ ನಿರ್ಣಯಿಸಲಾಗಿದೆ."

ಮಾನ್ಯರೆ, ತಮಗೆ ತಿಳಿದಿರುವಂತೆ, ಕಳೆದ ಬಾರಿ ಸಭೆಯಿಂದ ಸಿಬ್ಬಂದಿ ಮತ್ತು ಹಣಕಾಸು ಸಮಿತಿಗಳನ್ನು ಚುನಾಯಿಸಲಾಗಿತ್ತು. ಅಲ್ಲಿಂದ ಇದುವರೆಗೆ, ಕೆಲವು ಸದಸ್ಯರು ಸಭೆಯ ಸದಸ್ಯರಾಗಿ ಮುಂದುವರೆಯದೆ ನಿರ್ಗಮಿಸಿದ್ದಾರೆ. ನಿಯಮಗಳ ಅಡಿಯಲ್ಲಿ, ಅವರು ಸಭೆಯ ಸದಸ್ಯತ್ವವನ್ನು ನೀಗಿಕೊಂಡಂತೆ, ಸಮಿತಿಯ ಸದಸ್ಯತ್ವವನ್ನೂ ನೀಗಿಕೊಳ್ಳುತ್ತಾರೆ. ಆದುದರಿಂದ, ಈ ಸಮಿತಿಯಲ್ಲಿ ಸ್ಥಾನಗಳು ತೆರವಾಗಿದೆ. ಅವುಗಳನ್ನು ತುಂಬುವ ಕ್ರಮವನ್ನು ಕೈಗೊಳ್ಳುವ ಅಧ್ಯಕ್ಷರು, ನಿರ್ಧರಿಸಬೇಕು, ತಮ್ಮ ಅಂಗೀಕಾರಕ್ಕೆಂದು ಈ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

**ಮಾನ್ಯ ಅಧ್ಯಕ್ಷರು** : ಶ್ರೀ ಸತ್ಯನಾರಾಯಣ ಸಿನ್ಹ ಅವರು ಪ್ರಸ್ತಾವವನ್ನು ಮಂಡಿಸಿದ್ದಾರೆ.

"ಈ ಸಭೆಯು ಸಂವಿಧಾನ ರಚನಾಸಭೆಯ ೪೨ (೧)ನೇ ನಿಯಮದ ಅಡಿಯಲ್ಲಿ ಅಗತ್ಯಪಡಿಸಿರುವ ಕ್ರಮದಂತೆ, ಈರ್ವರು ಸದಸ್ಯರನ್ನು ಸಿಬ್ಬಂದಿ ಹಾಗೂ ಹಣಕಾಸು ಸಮಿತಿಯ ಸದಸ್ಯರನ್ನಾಗಿ ಚುನಾಯಿಸಲು ಮುಂದುವರೆಯುವಂತೆ ನಿರ್ಣಯಿಸಲಾಗಿದೆ."

ಪ್ರಸ್ತಾವ ಅಂಗೀಕೃತವಾಯಿತು.

**ಸತ್ಯ ನಾರಾಯಣ ಸಿನ್ಹ** : ಮಾನ್ಯರೆ, ನಾನು ಪ್ರಸ್ತಾಪಿಸುತ್ತೇನೆ.

"ಈ ಸಭೆಯು, ಸಂವಿಧಾನ ರಚನಾಸಭೆಯ ೪೪ (೩)ನೇ ನಿಯಮದ ಅಡಿಯಲ್ಲಿ ಅಗತ್ಯಪಡಿಸಿರುವ ಕ್ರಮದಂತೆ, ಪರಿಚಯಪತ್ರ ಸಮಿತಿಗೆ ಮೂವರು ಸದಸ್ಯರನ್ನು ಚುನಾಯಿಸಲು ಮುಂದುವರೆಯುವಂತೆ ನಿರ್ಣಯಿಸಲಾಗಿದೆ."

ಮೊದಲ ಪ್ರಸ್ತಾವದಲ್ಲಿ ಹೇಳಿದ ಕೆಲವು ಮಾತುಗಳನ್ನು ನಾನೀಗ ಪುನರುಚ್ಚರಿಸಬೇಕಿದೆ. ಈ ಸಮಿತಿಗೆ ಮೊದಲು ಚುನಾಯಿತಾದ ಸದಸ್ಯರು ಈಗ ಸದಸ್ಯರಾಗಿ ಉಳಿದಿಲ್ಲ. ಆದುದರಿಂದ, ಸಭೆಯಲ್ಲಿ ಈಗ

ಉಪಸ್ಥಿತರಿರುವ ಸದಸ್ಯರಲ್ಲಿ ಮೂವರನ್ನು ಸನ್ಮಾನ್ಯ ಅಧ್ಯಕ್ಷರು ನಿರ್ಧರಿಸಿದ ಕ್ರಮದಲ್ಲಿ ಸದನವು ಚುನಾಯಿಸಬೇಕು.

**ಓರ್ವ ಗೌರವಾನ್ವಿತ ಸದಸ್ಯ :** ನಮಗೆ ನಿಯಮಗಳು ತಲುಪಿಲ್ಲ.

**ಮಾನ್ಯ ಅಧ್ಯಕ್ಷರು :** ಕೆಲವು ಸಮಿತಿಗಳಿಗೆ, ನಿಯಮಗಳ ಅನುಸಾರ, ಕೆಲವು ಸದಸ್ಯರನ್ನು ಚುನಾಯಿಸಬೇಕೆಂಬುದಕ್ಕೆ ಪ್ರಸ್ತಾವ ನಾವು ಪ್ರಸ್ತಾವವನ್ನು ಅಂಗೀಕರಿಸಿದರೆ, ನಂತರ ಆ ಸದಸ್ಯರನ್ನು ನಿಯಮಗಳ ಅನುಸಾರ ಚುನಾಯಿಸಬಹುದು. ಅದಕ್ಕೆ ಮುನ್ನವೇ ತಮಗೆ ನಿಯಮಗಳು ತಲುಪುತ್ತವೆ ಎಂದುಕೊಂಡಿದ್ದೇನೆ. (ನಗೆ).

ಈ ಬಗ್ಗೆ ಯಾವುದೇ ಚರ್ಚೆ ಅಗತ್ಯವೆನಿಸುವುದಿಲ್ಲ. ನಾನು ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ಸತ್ಯನಾರಾಯಣ ಸಿನ್ಹ್ :** ಮಾನ್ಯರೆ, ನಾನು ಪ್ರಸ್ತಾಪಿಸುತ್ತೇನೆ.

"ಈ ಸಭೆಯು ಸಂವಿಧಾನ ರಚನಾಸಭೆಯ ೪೫ (೨)ನೇ ನಿಯಮದ ಅಡಿಯಲ್ಲಿ ಅಗತ್ಯಪಡಿಸಿರುವ ಕ್ರಮದಂತೆ, ಮೂವರು ಸದಸ್ಯರನ್ನು ಸಮಿತಿಯ ಸದನ ಸದಸ್ಯರನ್ನಾಗಿ ಚುನಾಯಿಸಲು ಮುಂದುವರೆಯುವಂತೆ ನಿರ್ಣಯಿಸಲಾಗಿದೆ."

ಹಿಂದಿನ ಪ್ರಸ್ತಾವದಲ್ಲಿ ನಾನು ಆಡಿದ ಮಾತುಗಳನ್ನು ಈಗ ಪುನರುಚ್ಚರಿಸಬೇಕಿದೆ. ಮೊದಲು ಈ ಸಮಿತಿಗೆ ಚುನಾಯಿತರಾದ ಸದಸ್ಯರು ಈಗ ಸದಸ್ಯರಾಗಿ ಉಳಿದಿಲ್ಲ

**ಮಾನ್ಯ ಅಧ್ಯಕ್ಷರು :** ನಾನು ಇದನ್ನು ಸಹಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಅಂಗೀಕೃತವಾಯಿತು.

**ಶ್ರೀ ಸತ್ಯನಾರಾಯಣ ಸಿನ್ಹ :** ಮಾನ್ಯರೆ, ನಾನು ಪ್ರಸ್ತಾವಿಸುತ್ತೇನೆ.

ಈ ಸಭೆಯ ಸಂವಿಧಾನ ರಚನಾಸಭೆಯ ೪೦ (೨) ಮತ್ತು (೫)ನೇ ನಿಯಮಗಳ ಅಡಿಯಲ್ಲಿ ಅಗತ್ಯಪಡಿಸಿರುವ ಕ್ರಮದಂತೆ ಸಂಚಾಲಕ ಸಮಿತಿಗೆ ಒಂಬತ್ತು ಸದಸ್ಯರನ್ನು ಚುನಾಯಿಸಲು ಮುಂದುವರೆಯುವಂತೆ ನಿರ್ಣಯಿಸಲಾಗಿದೆ."

ಈ ಸಂಬಂಧವಾಗಿ ೪೦ನೇ ನಿಯಮದತ್ತ ತಮ್ಮ ಗಮವನ್ನು ಸೆಳೆಯಲು ಬಯಸುತ್ತೇನೆ. ನಿಯಮ ಈ ರೀತಿ ಇದೆ:

"ಒಂದು ಸಂಚಾಲಕ ಸಮಿತಿ, ಸಭೆಯ ಅವಧಿಗಾಗಿ ರಚಿಸಲ್ಪಡುತ್ತೆ. ಅದರಲ್ಲಿ ಮೊದಲು ಹನ್ನೊಂದು ಸದಸ್ಯರಿರುತ್ತಾರೆ. (ಅಧ್ಯಕ್ಷರ ಹೊರತು). ಅವರನ್ನು ಒಂಟಿ ವರ್ಗಾವಣೀಯ ಮತದ ವಿಧಾನದಲ್ಲಿ ಅನುಪಾತಿ/ಪ್ರಮಾಣಾನುಸಾರ ತತ್ತ್ವದಂತೆ ಸಭೆ ಚುನಾಯಿಸಬೇಕು"

ಕಳೆದ ಬಾರಿ ನಾವು ಹನ್ನೊಂದು ಸದಸ್ಯರನ್ನು ಚುನಾಯಿಸಿದ್ದೆವು. ಮೊದಲು ಸಭೆಯಿಂದ ಚುನಾಯಿತರಾದ ಸದಸ್ಯರಲ್ಲಿ ಮೂವರು ಸದಸ್ಯರಾಗಿ ಉಳಿದಿಲ್ಲ. ಆದುದರಿಂದ ಮೂರು ಸ್ಥಾನಗಳು ಖಾಲಿಯಾಗಿವೆ. ಅದೇ ನಿಯಮದ ೨ನೇ ಉಪನಿಯಮದಲ್ಲಿ, ತಾವು ಕೆಳಕಂಡಂತೆ ಇರುವುದನ್ನು ಗಮನಿಸಬಹುದು.

"ಸಭೆಯು ಕಾಲಕಾಲಕ್ಕೆ ತನಗೆ ಸೂಕ್ತವೆನಿಸಿದ ರೀತಿಯಲ್ಲಿ ಎಂಟು ಹೆಚ್ಚುವರಿ ಸದಸ್ಯರನ್ನು ಚುನಾಯಿಸಬಹುದು. ಪ್ರತಿನಿಧಿಗಳಿಗಾಗಿ ಅವರಲ್ಲಿ ನಾಲ್ವರು ಭಾರತೀಯ ರಾಜ್ಯಗಳ ಪ್ರತಿನಿಧಿಗಳಿಗಾಗಿ ಮೀಸಲಿಟ್ಟ ಸ್ಥಾನಗಳಿಗೆ ಆಯ್ಕೆಗೊಳ್ಳುವುದು."

ಈ ಎಂಟು ಹೆಚ್ಚುವರಿ ಸ್ಥಾನಗಳಲ್ಲಿ ನಾಲ್ಕು ರಾಜ್ಯಪ್ರತಿನಿಧಿಗಳಿಗಾಗಿ ಮೀಸಲಿಡಲ್ಪಟ್ಟಿದ್ದುವು. ಈ ನಾಲ್ಕರ ಪೈಕಿ ಕಳೆದ ಬಾರಿ, ರಾಜ್ಯಪ್ರತಿನಿಧಿಗಳಿಂದ ಈರ್ವರನ್ನು ಆಯ್ಕೆ ಮಾಡಿದ್ದೆವು. ಆದುದರಿಂದ ರಾಜ್ಯಗಳಿಗೆಂದು ಮಿಸಲಿಟ್ಟ ಇನ್ನೆರಡು ಖಾಲಿ ಸ್ಥಾನಗಳನ್ನು ತುಂಬಬೇಕಿದೆ. ಇನ್ನುಳಿದ ನಾಲ್ಕು ಸ್ಥಾನಗಳನ್ನು

ಸಾಮಾನ್ಯ ಕ್ಷೇತ್ರಗಳಿಂದ ಚುನಾಯಿತರಾದ ಸದಸ್ಯರ ಪೈಕಿ ನಾಲ್ವರನ್ನು ಚುನಾಯಿಸಿ ಭರ್ತಿ ಮಾಡಬೇಕು. ಈ ಆರು ಸ್ಥಾನಗಳನ್ನು ಪ್ರಮಾಣಾನುಸಾರ ತತ್ತ್ವದ ಆಧಾರದ ಮೇಲೆ ತುಂಬಬೇಕಿದೆ. ಮತ್ತು ಮೂರು ಸಾಂದರ್ಭಿಕ ಖಾಲಿ ಸ್ಥಾನಗಳನ್ನು ಅಧ್ಯಕ್ಷರು ನಿರ್ಧರಿಸಿದ ರೀತಿಯಲ್ಲಿ ತುಂಬಬೇಕು. ನಾನು ಹೇಳಬಯಸುವುದೇನೆಂದರೆ, ರಾಜ್ಯಪ್ರತಿನಿಧಿಗಳಿಂದ ಈರ್ವರು ಸದಸ್ಯರನ್ನು ಪ್ರಮಾಣಾನುಸಾರ ತತ್ತ್ವದ ಮೇಲೆ ಚುನಾಯಿಸಿದಂತೆಯೇ, ಉಳಿದ ಆರು ಖಾಲಿ ಸ್ಥಾನಗಳನ್ನೂ ಸಹ ಪ್ರಮಾಣಾನುಸಾರ ತತ್ತ್ವದ ಮೇಲೆ ಚುನಾಯಿಸಲು ಸದನದ ಸದಸ್ಯರ ಅನುಮೋದನೆ ಕೋರುತ್ತೇನೆ. ಮತ್ತು ಇವುಗಳಲ್ಲಿ ಎರಡನ್ನು ರಾಜ್ಯಪ್ರತಿನಿಧಿಗಳಿಗಾಗಿ ಮೀಸಲಿಡಲಾಗುವುದು. ಇತರ ಮೂರು ಸ್ಥಾನಗಳನ್ನು ಇತರ ಸಮಿತಿಗಳ ಸದಸ್ಯರ ಚುನಾವಣೆಯಂತೆಯೇ, ಅಧ್ಯಕ್ಷರು ನಿರ್ಧರಿಸಿದಂತೆ, ಅವರಿಗೆ ಸೂಕ್ತವೆನಿಸಿದಂತೆ, ಚುನಾವಣೆ ಮೂಲಕ ಭರ್ತಿ ಮಾಡಲಾಗುವುದು.

**ಮಾನ್ಯ ಅಧ್ಯಕ್ಷರು** : ಇದರ ಬಗ್ಗೆ ಚರ್ಚಿಸುವ ಅಗತ್ಯವಿದೆಯೇ?

ನಾನು ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಅಂಗೀಕೃತವಾಯಿತು.

## ಉಪಾಧ್ಯಕ್ಷರ ಚುನಾವಣೆ

**ಮಾನ್ಯ ಅಧ್ಯಕ್ಷರು** : ಈಗ ನಾವು ಪ್ರಸ್ತಾವವೊಂದನ್ನು ಪರಿಶೀಲಿಸಬೇಕಿದೆ. ಅದೆಂದರೆ ಈರ್ವರು ಉಪಾಧ್ಯಕ್ಷರನ್ನು ಚುನಾಯಿಸುವುದು. ಈಗಿರುವ ನಿಯಮಗಳ ಅಡಿಯಲ್ಲಿ ಸದನವು ಈರ್ವರು ಉಪಾಧ್ಯಕ್ಷರನ್ನು ಚುನಾಯಿಸಬೇಕು. ಮೂವರು ಪದನಿಮಿತ್ತ ಉಪಾಧ್ಯಕ್ಷರು ಇರಬೇಕು. ಅವರು ಮೂರು ವರ್ಗಗಳ ಅಧ್ಯಕ್ಷರಾಗಬೇಕಿತ್ತು. ಈಗ ಪ್ರಸ್ತಾಪಿಸುವ ತಿದ್ದುಪಡಿಯೆಂದರೆ, ವರ್ಗಗಳು, ಸೇರದಿರುವ ಕಾರಣ, ನಿಯಮಗಳಿಂದ ವರ್ಗಗಳನ್ನು ಕುರಿತ ಎಲ್ಲ ಉಲ್ಲೇಖಗಳನ್ನು ಕೈಬಿಡಬೇಕು. ಆದುದರಿಂದ ಆ ಮೂವರು ಉಪಾಧ್ಯಕ್ಷರು ಈಗ ಉಪಾಧ್ಯಕ್ಷರಾಗಿ ಉಳಿಯುವುದಿಲ್ಲ. ಏಕೆಂದರೆ, ಈಗ ವರ್ಗಗಳು ಇರಲಾರವು ಅವುಗಳ ಅಧ್ಯಕ್ಷರಾಗಿ ಮೂವರು ಉಪಾಧ್ಯಕ್ಷರು ಇರಬೇಕಿತ್ತು. ಈಗ ಆ ಪರಿಸ್ಥಿತಿ ಇಲ್ಲ. ಕಳೆದಬಾರಿ ಚುನಾಯಿತರಾದ ಉಪಾಧ್ಯಕ್ಷರೆಂದರೆ ಡಾ. ಎಚ್.ಸಿ. ಮುಖರ್ಜಿ. ಹೊಸ ವ್ಯವಸ್ಥೆಯಿಂದಾಗಿ ಅವರು ಈಗ ಸಂವಿಧಾನ ರಚನಾಸಭೆಯ ಸದಸ್ಯರಾಗಿ ಉಳಿದಿಲ್ಲ. ಬಂಗಾಳದ ಎಲ್ಲ ಚುನಾಯಿತ ಸದಸ್ಯರು ಈಗ ಸಂವಿಧಾನ ರಚನಾಸಭೆಯ ಸದಸ್ಯರಾಗಿ ಉಳಿದಿಲ್ಲ ಆದುದರಿಂದ ಅವರೀಗ ಮರುಚುನಾಯಿತರಾಗಿಯೂ, ಸದಸ್ಯತ್ವ ಕಳೆದುಕೊಂಡು ಈಗ ಉಪಾಧ್ಯಕ್ಷರಾಗಿ ಉಳಿದಿಲ್ಲ. ಈಗ ಅವರ ಸ್ಥಾನಕ್ಕೆ ಬೇರಾರನ್ನಾದರೂ ಚುನಾಯಿಸಬೇಕು. ಅವರನ್ನು ಮತ್ತೆ ಚುನಾಯಿಸಲು ಸದಸ್ಯರು ಒಪ್ಪುತ್ತಾರೋ ಇಲ್ಲವೋ ತಿಳಿಯದು. ಆದರೆ, ಅದು ಬೇರೆ ವಿಷಯವಷ್ಟೆ. ಇದೇನಂಥ ಕ್ಲಿಷ್ಟ ಪ್ರಶ್ನೆಯಾಗದ ಕಾರಣ, ವಾಸ್ತವಿಕ ಸಮಸ್ಯೆಯೇನೂ ಇದರಲ್ಲಿ ತೋರುವುದಿಲ್ಲ, ಇಬ್ಬರು ಉಪಾಧ್ಯಕ್ಷರನ್ನು ಚುನಾಯಿಸಬೇಕೆಂಬುದಷ್ಟೆ ಪ್ರಸ್ತಾವ. ಹೌದು, ಚುನಾವಣೆ ನಾಳೆ ಇಲ್ಲವೆ ನಾಳಿದ್ದು ನಡೆಯಬಹುದು. ನೀವು ಹೇಳಬೇಕಾದುದಿಷ್ಟೆ. ಈರ್ವರು ಉಪಾಧ್ಯಕ್ಷರ ಸ್ಥಾನವನ್ನು ತುಂಬಬೇಕು, ಸದಸ್ಯರಿಗೇನೂ ಆಕ್ಷೇಪಣೆ ಇಲ್ಲವಾದರೆ, ನಾನು ಪ್ರಸ್ತಾವಕರನ್ನು ಪ್ರಸ್ತಾವ ಮಂಡಿಸುವಂತೆ ಕೇಳುತ್ತೇನೆ. ಆದರೆ ಯಾವ ಸದಸ್ಯರಿಂದಲಾದರೂ ಆಕ್ಷೇಪಣೆ ಬಂತೆಂದರೆ ನಾನು ಪ್ರಸ್ತಾವವನ್ನು ಮುಂದೂಡುತ್ತೇನೆ.

**ಗೌರವಾನ್ವಿತ ಸದಸ್ಯರು** : ನಮಗೇನೂ ಆಕ್ಷೇಪಣೆ ಇಲ್ಲ.

**ಮಾನ್ಯ ಅಧ್ಯಕ್ಷರು** : ಹಾಗಾದರೆ, ಶ್ರೀ ಸತ್ಯನಾರಾಯಣ ಸಿನ್ಹ, ತಾವು ಪ್ರಸ್ತಾವವನ್ನು ಮಂಡಿಸು ಬಹುದು.

**ಶ್ರೀ ಸತ್ಯನಾರಾಯಣ ಸಿನ್ಹ** : ಮಾನ್ಯರೆ, ನಾನು ಮಂಡಿಸುತ್ತೇನೆ.

ಸಂವಿಧಾನ ರಚನಾಸಭೆಯ ನಿಯಮಗಳಲ್ಲಿರುವ ಉಪಬಂಧಗಳ ಅನುಸಾರ ಈರ್ವರು ಉಪಾಧ್ಯಕ್ಷರನ್ನು

ಈ ಸಭೆ ಚುನಾಯಿಸಬೇಕೆಂದು ನಿರ್ಣಯಿಸಲಾಗಿದೆ.

ಮಾನ್ಯರೆ, ನಾವು ಕೇವಲ ಇಬ್ಬರೆ ಉಪಾಧ್ಯಕ್ಷರನ್ನು ಚುನಾಯಿಸಬೇಕೆಂದು ತಾವಾಗಲೆ ವಿವರಿಸಿದ್ದೀರಿ. ಕಳೆದ ಬಾರಿ ನಾವು ಒಬ್ಬರೆ ಉಪಾಧ್ಯಕ್ಷರನ್ನು ಚುನಾಯಿಸಿದೆವು. ಮಿಕ್ಕ ಒಂದು ಸ್ಥಾನವನ್ನು ನಂತರದಲ್ಲಿ ತುಂಬಲೆಂದು ಅಂತೆಯೇ ಖಾಲಿ ಬಿಟ್ಟೆವು. ಈ ಸದನದ ಉಪಾಧ್ಯಕ್ಷರಾಗಿ ಡಾ. ಮುಖರ್ಜಿಯವರು ಸರ್ವಾನುಮತದಿಂದ ಚುನಾಯಿತರಾದರು. ಬಂಗಾಳ ವಿಭಜನೆಯ ಕಾರಣದಿಂದ ಅವರು ಸದಸ್ಯರಾಗಿ ಉಳಿಯಲಿಲ್ಲ. ಸದನಕ್ಕೆ ಅವರ ಮರು ಆಯ್ಕೆ ನನಗೆ ಸಂತೋಷ ತಂದಿದೆ. ಆದರೆ ನಿಯಮಗಳ ಅಡಿಯಲ್ಲಿ ಪರಿಸ್ಥಿತಿಯೇನೂ ಬದಲಾಗಿಲ್ಲ. ಎಷ್ಟಾದರೂ ಅವರು ನೂತನ ಚುನಾಯಿತ ಸದಸ್ಯರು; ಹಾಗಾಗಿ ನಾವು ಮತ್ತೊಬ್ಬರು ಉಪಾಧ್ಯಕ್ಷರನ್ನು ಚುನಾಯಿಸಬೇಕು. ಚುನಾವಣಾ ಕ್ರಮವನ್ನು ಅಧ್ಯಕ್ಷರೆ ನಿರ್ಧರಿಸಬೇಕು.

**ಡಾ. ಎನ್.ಬಿ. ಖರೆ :** (ಆಳ್ವಾರ್ ರಾಜ್ಯ) : ಮಾನ್ಯರೆ, ನಾನು ಪ್ರಸ್ತಾವವನ್ನು ಬೆಂಬಲಿಸುತ್ತೇನೆ. ನನ್ನ ಸಲಹೆ ಎಂದರೆ, ಇಬ್ಬರು ಉಪಾಧ್ಯಕ್ಷರಲ್ಲಿ......

**ಗೌರವಾನ್ವಿತ ಸದಸ್ಯರು :** ದಯಮಾಡಿ ಧ್ವನಿವರ್ಧಕದಲ್ಲಿ ಮಾತನಾಡಿ.

**ಡಾ. ಎನ್.ಬಿ. ಖರೆ :** ನಾನು ಬಹಳ ಜೋರಾಗಿ ಮಾತನಾಡುತ್ತಿದ್ದೇನೆ (ನಗೆ)– ಒಂದು ಸ್ಥಾನವನ್ನು ರಾಜ್ಯಗಳ ಸಮೂಹದಿಂದ ತುಂಬಬೇಕು.

**ಮಾನ್ಯ ಅಧ್ಯಕ್ಷರು :** ಕ್ಷಮಿಸಿ ಶ್ರೀ ಖರೆ, ತಾವು ಹೇಳಿದ್ದು ಕೇಳಿಸಲಿಲ್ಲ (ಮರುಕಳಿಸಿದ ನಗೆ).

**ಡಾ. ಎನ್.ಬಿ. ಖರೆ :** ನಾನು ಈ ಪ್ರಸ್ತಾವವನ್ನು ಬೆಂಬಲಿಸುತ್ತೇನೆ. ಅದೇ ವೇಳೆ ನನ್ನದೊಂದು ವಿನಮ್ರ ಸಲಹೆ. ನಾವು ಚುನಾಯಿಸುವ ಇಬ್ಬರು ಉಪಾಧ್ಯಕ್ಷರಲ್ಲಿ ಒಬ್ಬರು ರಾಜ್ಯಗಳ ಪ್ರತಿನಿಧಿಗಳ ಪೈಕಿ ಆಯ್ಕೆಗೊಳ್ಳಲಿ. ಹೀಗೆಂದ ಮಾತ್ರಕ್ಕೆ ರಾಜ್ಯಗಳಿಗೆ ಪ್ರಮಾಣಾನುಸಾರ ಪ್ರಾತಿನಿಧ್ಯದ ಆಧಾರದ ಮೇಲೆ ಚುನಾವಣೆಯಾಗಬೇಕೆಂದು ಅರ್ಥವಲ್ಲ.

**ಮಾನ್ಯ ಅಧ್ಯಕ್ಷರು :** ನಾನು ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಅಂಗೀಕೃತವಾಯಿತು.

**ಮಾನ್ಯ ಅಧ್ಯಕ್ಷರು :** ನಾನೀಗ ಕೆಲವು ಪ್ರಕಟಣೆಗಳನ್ನು ಮಾಡುವುದಿದೆ. ಈ ಎಲ್ಲ ಚುನಾವಣೆಗಳನ್ನು ನಡೆಸಬೇಕೆಂದು ನಾವು ನಿರ್ಧರಿಸಿದ್ದೇವೆ. ನಾಮಪತ್ರ ಸಲ್ಲಿಕೆಗೆ ವೇಳೆ ನಿಗದಿಯಾಗಬೇಕು. ಅಗತ್ಯಬಿದ್ದರೆ ಮತದಾನಕ್ಕೆ ವೇಳೆ ಗೊತ್ತುಮಾಡಬೇಕು. ಕೆಳಗೆ ಕಂಡಂತೆ ವೇಳೆಗಳನ್ನು ಗೊತ್ತುಮಾಡುತ್ತಿದ್ದೇನೆ.

೧೬ರಂದು ಕಾರ್ಯದರ್ಶಿ ನಾಮಪತ್ರಗಳನ್ನು ಮಧ್ಯಾಹ್ನ ೧ ಘಂಟೆಯವರೆಗೆ ಸ್ವೀಕರಿಸುತ್ತಾರೆ. ಇಂದಿನಿಂದ ೪೮ ತಾಸುಗಳವರೆಗೆ ನಾಮಪತ್ರಗಳನ್ನು ಸಲ್ಲಿಸಲು ಕಾಲಾವಕಾಶ ಕೊಟ್ಟಿದ್ದೇನೆ. ಚುನಾವಣೆಗಳು ಮಧ್ಯಾಹ್ನ ಮೂರರಿಂದ ನಾಲ್ಕು ಘಂಟೆಯವರೆಗೆ ನಡೆಯುತ್ತವೆ. ಒಂಟಿ ವರ್ಗಾವಣೀಯ ಮತದಾನದ ವಿಧಾನದಲ್ಲಿ ಪ್ರಮಾಣಾನುಸಾರ ಪ್ರಾತಿನಿಧ್ಯದ ತತ್ತ್ವದ ಮೇಲೆ ನಡೆಯಲಿವೆ. ಚುನಾವಣೆ (ನಂ ೨೫) ಅಧೀನ ಕಾರ್ಯದರ್ಶಿಯ ಕೋಣೆಯಲ್ಲಿ ೧೭ರಂದು ನಡೆಯುತ್ತದೆ. ಈಗಷ್ಟೆ ನಾವು ಅಂಗೀಕರಿಸಿದ ಪ್ರಸ್ತಾವಗಳ ಮೇರೆಗೆ ಬೇರೆ ಬೇರೆ ಉಪಸಮಿತಿಗಳಿಗೆ ಚುನಾವಣೆಗಳು ಸಂಬಂಧಿಸಿವೆ.

ಉಪಾಧ್ಯಕ್ಷರ ವಿಷಯದಲ್ಲಿ ಪ್ರಮಾಣಾನುಸಾರ ಪ್ರಾತಿನಿಧ್ಯದ ಪ್ರಶ್ನೆ ಏಳುವುದಿಲ್ಲ. ಆದರೆ ಕೆಲವು ನಿಯಮಗಳಿಗೆ ಬದ್ಧವಾಗಿ ಚುನಾವಣೆ ನಡೆಯಬೇಕಿದೆ. ನಾಳೆ ಸಂಜೆ ೫ ಘಂಟೆಗೆ ನಾಮಪತ್ರಗಳನ್ನು ಸ್ವೀಕರಿಸಲು ಗೊತ್ತುಮಾಡಿದ್ದೇನೆ. ಅದರ ಮುಂದಿನ ದಿನ, ಅದೇ ಕೋಣೆಯಲ್ಲಿ ಅಗತ್ಯಬಿದ್ದರೆ ಮಧ್ಯಾಹ್ನ ೪ ಘಂಟೆಗೆ ಚುನಾವಣೆ ನಡೆಯುವುದು.

ಇವತ್ತಿನ ಕಾರ್ಯಕಲಾಪಗಳನ್ನು ಮುಂದೂಡುವ ಮೊದಲು, ಇನ್ನೊಂದು ವಿಷಯವನ್ನು ತಿಳಿಸಬೇಕಿದೆ. ಅದು ನಾಳೆಯಿಂದ ನಮ್ಮ ಅಧಿವೇಶನಗಳ ವೇಳೆಗೆ ಸಂಬಂಧಿಸಿದೆ. ನಮ್ಮ ಎಂದಿನ ಪ್ರಕ್ರಿಯೆಯಂತೆ, ನಾಳೆ ಬೆಳಗ್ಗೆ ೧೦ ಘಂಟೆಗೆ ಸಭೆ ಸೇರುವಂತೆ ಕಾರ್ಯದರ್ಶಿ ಸೂಚಿಸಿದ್ದಾರೆ. ಪ್ರತಿ ದಿನ ಮಧ್ಯಾಹ್ನ ೩ ರಿಂದ ೬ರ

ವರೆಗೆ ನಾವು ಸಭೆ ಸೇರುವುದು ಉತ್ತಮವೆಂದು ಸಲಹೆ ಮಾಡಿದೆ. ಅದರಿಂದ ಸದಸ್ಯರು ಹಲವಾರು ಪ್ರಸ್ತಾವಗಳನ್ನು ಕುರಿತು ಆಲೋಚಿಸಲು ಕಾಲಾವಕಾಶ ದೊರೆಯುತ್ತದೆ. ಈ ಉದ್ದೇಶ ನೆರವೇರಲು ಅವರಿಗೆ ಇಡೀ ದಿನ ಬೆಳಗ್ಗೆ ಸಮಯ ಸಿಗುತ್ತದೆ. ಆದುದರಿಂದ, ನಾಳೆಯಿಂದ ಮಧ್ಯಾಹ್ನ ೩ರಿಂದ ಸಂಜೆ ೬ರ ವರೆಗೆ ಸಭೆ ಸೇರುವುದೆಂದು ಸೂಚಿಸುತ್ತಿದ್ದೇವೆ.

**ಶ್ರೀ ತಾಜುಮಲ್ ಹುಸೇನ್ :** ಮಾನ್ಯರೆ, ಮಧ್ಯಾಹ್ನ ೩ರಿಂದ ೪ ರವರೆಗೆ ಸಭೆ ಸೇರುವುದು ಸದಸ್ಯರಿಗೆ ಅನನುಕೂಲ. ಏಕೆಂದರೆ, ಆಗ ಬಿಸಿಲಿನ ತಾಪ. ನಾವಿಲ್ಲಿ ಮಧ್ಯಾಹ್ನ ೩ ಘಂಟೆಗೆ ಹಾಜರಿರಬೇಕೆಂದರೆ ಮಧ್ಯಾಹ್ನ ೧೨ ಇಲ್ಲವೆ ೧ ಘಂಟೆಗೆ ಹೊರಟು ಬಹೂದೂರ ಪ್ರಯಾಣ ಮಾಡಿ ಬರಬೇಕಾಗುತ್ತದೆ. ಅತ್ಯುತ್ತಮ ವೇಳೆ ಎಂದರೆ, ನಾವೀಗ ಬಂದಿರುವಂತೆ ಪ್ರಾತಃಕಾಲವಾಗಬಹುದು. ನಾವು ಅಗತ್ಯವಿದ್ದರೆ ಬೆಳಗ್ಗೆ ೧೧ ಘಂಟೆಯಿಂದ ಮಧ್ಯಾಹ್ನ ೧ ಅಥವಾ ೧.೩೦ರ ವರೆಗೆ ನಮ್ಮ ವ್ಯವಹಾರಗಳನ್ನು ನಡೆಸಬಹುದು.

**ಮಾನ್ಯ ಅಧ್ಯಕ್ಷರು :** ದೆಹಲಿಯಲ್ಲಿ ಮಧ್ಯಾಹ್ನ ೧ ಘಂಟೆಯಲ್ಲೂ ಸುಡುಬಿಸಿಲು, ಆ ಹೊತ್ತಿನಲ್ಲಿ ನಾವು ಸಭೆ ಮುಗಿಸಿ ಹೊರಡಬೇಕು. ನೀವು ಮಧ್ಯಾಹ್ನ ೧ ಘಂಟೆಗೆ ಯಾ ೨ ಘಂಟೆಗೆ ಹೊರಟರೂ. ವ್ಯತ್ಯಾಸವೇನೂ ಆಗದು.

**ಬೇಗಂ ಐಜಾಜ್ ರಸೂಲ್** (ಸಂ. ಪ್ರಾಂ. : ಮುಸ್ಲಿಮ್) : ನನ್ನದೊಂದು ಸೂಚನೆ. ಇನ್ನು ಕೆಲವು ದಿನಗಳಲ್ಲಿ ರಂಜಾನ್ ಪ್ರಾರಂಭವಾಗುತ್ತದೆ. ಮುಸ್ಲಿಂ ಸದಸ್ಯರಿಗೆ ಆ ವೇಳೆ ಮಧ್ಯಾಹ್ನ ೩ರಿಂದ ೬ರವರೆಗೆ ಕೂಡುವುದು ಕಷ್ಟವಾಗುತ್ತದೆ. ಏಕೆಂದರೆ ಸಭೆ ಮುಗಿಯುತ್ತಿದ್ದಂತೆ, ಉಪವಾಸ ಬಿಡಬೇಕು. ಆದುದರಿಂದ ಪ್ರಾತಃಕಾಲ ಸೂಕ್ತವೆಂದು ನನ್ನ ಸಲಹೆ.

**ಮಾನ್ಯ ಅಧ್ಯಕ್ಷರು :** ರಂಜಾನ್ ಯಾವಾಗ ಪ್ರಾರಂಭವಾಗುತ್ತದೆ ಎಂಬುದು ನನಗೆ ತಿಳಿಯದು. ಆ ಪ್ರಶ್ನೆಯನ್ನು ರಂಜಾನ್ ಬಂದಾಗ ಮತ್ತೆ ಪರಿಶೀಲಿಸಬಹುದು. ಯಾವುದೇ ಸಂದರ್ಭದಲ್ಲಿ ನಾವು ಸಂಜೆ ೬ ಘಂಟೆಯ ಹೊತ್ತಿಗೆ, ಸಭೆಯ ಕಲಾಪಗಳನ್ನು ಒಂದು ಘಂಟೆ ಮುಂಚೆ ಮುಗಿಸುವುದರಿಂದ ಮತ್ತು ಇಲ್ಲಿ ೭ ಘಂಟೆಗೆ ಹೊತ್ತು ಮುಳುಗುವುದರಿಂದ ಸಮಯ ಸೂಕ್ತವೆನಿಸುತ್ತದೆ. ಸದನ ನನ್ನ ಸಲಹೆಯನ್ನು ಅಂಗೀಕರಿಸುತ್ತದೆ ಎಂದು ಭಾವಿಸುತ್ತೇನೆ.

ನಾಳೆ ಮಧ್ಯಾಹ್ನ ೩ ಘಂಟೆಗೆ ಸಭೆ ಮುಂದೂಡಲಾಗಿದೆ.

ನಂತರ ಸಭೆ ಮಂಗಳವಾರ ೧೫ ಜುಲೈ ೧೯೪೭ಕ್ಕೆ ಮುಂದೂಡಲ್ಪಟ್ಟಿತು.

*[ಆಂಗ್ಲಭಾಷೆಯ ಹಿಂದುಸ್ತಾನಿ ಭಾಷಾಂತರ]*

# ಅನುಬಂಧ

ನಂ. ಸಿ. ಎ./೨೨/ಕಾಂ/೧೪೭.
ಭಾರತದ ಸಂವಿಧಾನ ರಚನಾಸಭೆ.
ವ್ಯವಹಾರ ಆದೇಶದ ಸಮಿತಿಯ ವರದಿ
ಪರಿಷನ್ಮಂದಿರ
ನವದೆಹಲಿ ೯ ಜುಲೈ ೧೯೪೭

ಇಂದ
ಅಧ್ಯಕ್ಷರು.
ವ್ಯವಹಾರದ ಆದೇಶ ಸಮಿತಿ

ಅವರಿಗೆ
ಅಧ್ಯಕ್ಷರು
ಭಾರತ ಸಂವಿಧಾನ ರಚನಾಸಭೆ.

ಮಾನ್ಯರೆ,

ಕಳೆದ ಸಭೆಯ ಅಧಿವೇಶನದಲ್ಲಿ ನಾವು ಒಂದು ವರದಿಯನ್ನು ಸಲ್ಲಿಸಿದೆವು. ಅದು ಆವಶ್ಯಕವಾಗಿ ತಾತ್ಪೂರ್ತಿಕ ವರದಿಯಾಗಿತ್ತು. ಏಕೆಂದರೆ, ಅಂದಿನ ಸನ್ನಿವೇಶಗಳು ಅನಿಶ್ಚಿತವಾಗಿದ್ದುವು. ಅಲ್ಲಿಂದ ಗಮನಾರ್ಹ ಬದಲಾವಣೆಗಳು ಜರುಗಿವೆ. ಈಗ ನಮ್ಮ ನೆಲೆ ಖಚಿತಗೊಂಡಿದೆ. ಜೂನ್ ೩ರಂದು ಮಹಾಪ್ರಭುಗಳು ಒಂದು ಹೊಸ ಹೇಳಿಕೆಯನ್ನು ನೀಡಿದ್ದಾರೆ. ಅದು ಎಲ್ಲ ರಾಜಕೀಯ ಪಕ್ಷಗಳ ಅಂಗೀಕಾರ ಪಡೆದಿದೆ. ಆ ಹೇಳಿಕೆಯ ಮೇರೆಗೆ ಕೈಗೊಂಡ ನಿರ್ಧಾರದ ಫಲವಾಗಿ ಭಾರತದ ಕೆಲವು ಭಾಗಗಳು ರಾಷ್ಟ್ರದಿಂದ ಪ್ರತ್ಯೇಕಗೊಳ್ಳುತ್ತವೆ. ನಾವು ಯೋಜನೆಯ ಕೆಲವು ಮೂಲತತ್ತ್ವಗಳು ಮತ್ತು ಪ್ರಕ್ರಿಯೆಗಳಿಗೆ ಬದ್ಧರಾಗಿ ಇಲ್ಲಿಯವರೆಗೆ ಕಾರ್ಯಪ್ರವೃತ್ತರಾಗಿದ್ದೆವು. ಈ ಬದಲಾವಣೆಗಳು ಅವುಗಳಲ್ಲೊಂದು ಕ್ರಾಂತಿಕಾರಕ ಪರಿವರ್ತನೆಯನ್ನುಂಟುಮಾಡಿವೆ. ಪ್ರಕ್ರಿಯೆಯ ಅಂಶಕ್ಕೆ ಸಂಬಂಧಿಸಿದಂತೆ, ಸಭೆಯು ವರ್ಗವಾರು ವಿಭಜನೆಗೊಳ್ಳುವ ಅಗತ್ಯ ಇನ್ನಿಲ್ಲ. ಸಮೂಹದ ಪ್ರಶ್ನೆ ಏಳುವುದಿಲ್ಲ. ಜೋಡು ಬಹುಮತದ ಉಪಬಂಧಗಳನ್ನೂ ಲೆಕ್ಕಿಸುವಂತಿಲ್ಲ. ಇವು ಮುಖ್ಯವಾದ ಕೋಮು ಪ್ರಾಧಾನ್ಯ ವಿಷಯಗಳಲ್ಲಿ ನಗಣ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ನಾವು ಜುಲೈ ೩ರಂದು ಸಭೆ ಸೇರಿದ್ದೆವು. ಪಂಡಿತ್ ನೆಹರು ಅವರು ನಮ್ಮ ಕೋರಿಕೆಯ ಮೇರೆಗೆ ಸಭೆಯಲ್ಲಿ ಉಪಸ್ಥಿತರಿದ್ದರು. ಅವರ ಸಹಕಾರಕ್ಕೆ ನಾವು ಕೃತಜ್ಞರಾಗಿದ್ದೇವೆ.

೨. ನಮಗೆ ತಿಳಿದಿರುವಂತೆ, ಬರುವ ಅಧಿವೇಶನದಲ್ಲಿ ಸಭೆಯ ಮುಂದೆ ಮೂರು ವರದಿಗಳು ಪರಿಶೀಲನೆಗೆ ಬರುತ್ತದೆ. ಒಕ್ಕೂಟದ ಸಂವಿಧಾನ ರಚನಾಸಮಿತಿ ಒಕ್ಕೂಟದ ಅಧಿಕಾರ ಸಮಿತಿ ಮತ್ತು ಪ್ರಾಂತೀಯ ಸಂವಿಧಾನ ರಚನಾಸಮಿತಿಯ ವರದಿಗಳು. ನಡುವೆ ಈ ವರದಿಗಳು ಹಲವಾರು ಪ್ರಧಾನ ಪ್ರಶ್ನೆಗಳು ನಿರ್ವಹಣೆ ತೆರೆದುಕೊಳ್ಳುತ್ತವೆ. ಅವು ಸಭೆಯ ನಿರ್ಧಾರವನ್ನು ಬೇಡುವಂಥವು. ಜುಲೈ ಅಧಿವೇಶನದಲ್ಲಿ ಸಭೆಯು ಈ ವರದಿಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಂತೆ ನಾವು ಶಿಫಾರಸ್ಸು ಮಾಡುತ್ತೇವೆ. ಸಂವಿಧಾನ ಮಸೂದೆಯ ಕೆಲಸ ತ್ವರಿತವಾಗಿ ನಡೆಯುವ ನಿರ್ದೇಶನ ನೀಡುವಂತೆ ಶಿಫಾರಸ್ಸು ಮಾಡಲಾಗಿದೆ. ಸಂವಿಧಾನದ ಕರಡನ್ನು ಸಭೆಯ ನಂತರ ಅಧಿವೇಶನದಲ್ಲಿ ಮಂಡಿಸುವ ಮೊದಲು, ಅದರ ಸರಿತಪ್ಪು ನೋಡಲು ಒಂದು ಸಮಿತಿಯನ್ನು ಸಭೆ ನೇಮಕಮಾಡಬೇಕೆಂದು ಸೂಚಿಸಲಾಗಿದೆ.

೩. ಜುಲೈ ಅಧಿವೇಶನದ ಅಂತ್ಯದ ವೇಳೆಗೆ ಉಳಿಯುವ ವಿಷಯವೆಂದರೆ, ಮೂಲಭೂತ ಹಕ್ಕುಗಳ ಕುರಿತ ಸಲಹಾ ಸಮಿತಿ, ಅಲ್ಪಸಂಖ್ಯಾತರ ಸಮಿತಿ. ಬುಡಕಟ್ಟು ಮತ್ತು ಹೊರಗುಳಿದ ಪ್ರದೇಶಗಳ ಆಡಳಿತ ವರದಿಗಳು. ಆಗಸ್ಟ್ ವೇಳೆಗೆ ತನ್ನ ಕೆಲಸ ಪೂರ್ಣಗೊಳಿಸುವಂತೆ, ಸಲಹಾ ಸಮಿತಿಗೆ ಸೂಚಿಸಿದ್ದೇವೆ. ಕರಡು ರಚಿಸಿದವರು ಮಾಡಿದ ಶಿಫಾರಸ್ಸುಗಳನ್ನು ಮಸೂದೆಯಲ್ಲಿ ನಿಗಮಿತಗೊಳಿಸುವಂತೆ ತಿಳಿಸಿದ್ದೇವೆ. ಸಭೆಯು ಅವುಗಳ ಬಗ್ಗೆ ಏನೇ ನಿರ್ಧಾರವನ್ನು ಇನ್ನು ತೆಗೆದುಕೊಳ್ಳದಿದ್ದರೂ ಚಿಂತೆಯಿಲ್ಲ. ಅಂತಹ ಯಾವುದಾದರೂ ಬದಲಾವಣೆಗಳಿದ್ದರೆ, ಅವುಗಳನ್ನು ಸೂಕ್ತ ತಿದ್ದುಪಡಿಗಳ ಮೂಲಕ, ಕರಡು ಮಸೂದೆಯಲ್ಲಿ ನಿಗಮಿತಗೊಳಿಸಬಹುದು.

೪. ಈ ವರುಷ ಅಕ್ಟೋಬರ್ ಮಾಹೆಯ ಆಖೈರಿನೊಳಗೆ ಸಭೆಯು ತನ್ನ ಕಾರ್ಯವನ್ನು ಪೂರೈಸಬೇಕೆಂದು ನಮ್ಮ ಕೊನೆಯ ವರದಿಯಲ್ಲಿ ಸೂಚಿಸಿದ್ದೆವು. ನಾನು ಈ ಶಿಫಾರಸ್ಸನ್ನು ವರದಿಯಲ್ಲಿ ಸೂಚಿಸಿದ್ದೆವು. ಸಮಿತಿಗಳ ಪ್ರಗತಿಯನ್ನು ಪರಿಗಣಿಸಿದಾಗ, ಇದು ಕಾರ್ಯಸಾಧ್ಯವೆಂದು ನಮಗನಿಸುತ್ತದೆ. ಅದರಂತೆ ಸಂವಿಧಾನದ ಕರಡು ಪರಿಶೀಲನೆಗೆಂದು ಅಕ್ಟೋಬರ್ ವೇಳೆಗೆ ಎಂದರೆ ತಿಂಗಳ ಮೊದಲ ಭಾಗದಲ್ಲಿ ಉಚಿತವೆನಿಸುವ ರೀತಿಯಲ್ಲಿ, ಒಂದು ಅಧಿವೇಶನದ ಕರೆಯಲು, ಅಧ್ಯಕ್ಷರಿಗೆ ಅಧಿಕಾರ ನೀಡುವಂತೆ ಸಭೆಗೆ ಸೂಚಿಸಲು ಉದ್ದೇಶಿಸಿದ್ದೇವೆ.

೫. ಸಂವಿಧಾನ ರಚನಾ ಸಭೆಯ ೬೩ನೇ ನಿಯಮಾನುಸಾರ, ಬದಲಾದ ಸನ್ನಿವೇಶದಲ್ಲಿ, ಜುಲೈ ಅಧಿವೇಶನದಲ್ಲಿ ಕೈಗೊಂಡ ನಿರ್ಣಯಗಳ ಸುತ್ತೋಲೆ ಕಳುಹಿಸುವ ಅಗತ್ಯವಿದೆ ಎಂದು ನಮಗನಿಸುವುದಿಲ್ಲ.

೬. ನಮ್ಮ ಶಿಫಾರಸ್ಸುಗಳಲ್ಲಿ ನಿಯಮಾವಳಿಗೆ ತಿದ್ದುಪಡಿ ತರುವುದು ಸೇರಿದ್ದು, ಅದನ್ನು ಸಂಚಾಲಕ ಸಮಿತಿಯ ಪರಿಶೀಲಿಸಬೇಕೆಂದು ಕೋರುತ್ತೇವೆ.

ತಮ್ಮ ವಿಧೇಯನಾದ
ಸೇವಕ
ಕೆ.ಎಂ. ಮುನ್ಷಿ
ಅಧ್ಯಕ್ಷ
[ಸಮಿತಿಯ ಪರವಾಗಿ]